# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXII - 2 ಫೆಬ್ರುವರಿ 2004

ಈ ಸಂಚಿಕೆಯಲ್ಲಿ


ಹೊರನಾಡ ಕನ್ನಡಿಗರ - ಸಂಸ್ಕೃತಿ ಸಮಾವೇಶ ● ಎಂ.ಎ.ಎನ್. ಪ್ರಸಾದ್ 2

Forthcoming Programmes 5

ವ್ಯಾಖ್ಯಾನ ಭಾಸ್ಕರ - ಮತ್ತೂರು ಕೃಷ್ಣಮೂರ್ತಿ ● ಡಾ. ಜಿ.ಎನ್. ಉಪಾಧ್ಯ 6

ಸಾವರ್‌ಕರ್ ಜೀವನಕ್ರಮ ● ಡಾ. ಎಂ. ಜಿ. ಶೆಟ್ಟಿ 7

ಭಾರತೀಯ ಕಲೆ ಭಾಗ - 21
ಕೃಪೆ : ಎನ್. ಮರಿತಾಮಾಚಾರ್‌ರವರ ಭಾರತೀಯ ಕಲೆ 8

ಸುತ್ತ-ಮುತ್ತ 10



Rs. 5/-

E-mail : karunadu@bom5.vsnl.net.in

The Mysore Association, Mumbai
393. Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

# ಹೊರನಾಡ ಕನ್ನಡಿಗರ - ಸಂಸ್ಕೃತಿ ಸಮಾವೇಶ

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯು ಕಳೆದ 5 ವರ್ಷಗಳಿಂದ ಪ್ರತಿವರ್ಷವೂ ಹೊರನಾಡ ಕನ್ನಡಿಗರ ಕನ್ನಡ -ಸಂಸ್ಕೃತಿಯ ಸಮಾವೇಶವನ್ನು ನಡೆಸುತ್ತಾ ಬಂದಿದೆ. ಈ ಸಮಾವೇಶವು ತಾಯಿನಾಡಾದ ಕರ್ನಾಟಕದಿಂದ ಹೊರಗೆ



ಹೊರನಾಡ ಕನ್ನಡಿಗರ - ಸಂಸ್ಕೃತಿ ಸಮಾವೇಶವನ್ನು ಸಚಿವ ಶ್ರೀ ವಸಂತ ಸಾಲಿಯಾನ್‌ರವರು ದೀಪ ಪ್ರಜ್ವಲಿಸಿ ಉದ್ಘಾಟಿಸುತ್ತಿರುವುದು.

ಬಂದು ನೆಲೆಸಿರುವ ಕನ್ನಡಿಗರಿಗೆ, ತಾಯಿನಾಡಿನೊಡನೆ ಒಂದು ಸಾಂಸ್ಕೃತಿಕ ಸಂಪರ್ಕವಾಗಿಯೂ ಮತ್ತು ಅವರಲ್ಲಿ ಒಂದು ಸಂಪರ್ಕ ಸಾಧನೆಯೂ ಆಗಿದೆ. ವೃತ್ತಿಯ ಕಾರಣದಿಂದಲೋ ಅಥವಾ ಜೀವನೋಪಾಯ ಕ್ಕಾಗಿಯೋ, ತಾಯಿನಾಡಿನಿಂದ ಹೊರಗಡೆಗೆ ಬಂದ ಕನ್ನಡಿಗರು ಅಲ್ಲಿನ ಜೀವನ ಶೈಲಿಗೆ ಹೊಂದಿಕೊಂಡರೂ, ತಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಭಾಷೆಯನ್ನು ಉಳಿಸಿ ಬೆಳೆಸಲು ಆಯಾ ಊರುಗಳಲ್ಲಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡರು. ಈ ಸಂಘ ಸಂಸ್ಥೆಗಳು ಇವರೆಲ್ಲರನ್ನು ಒಟ್ಟು ಸೇರಿಸುವ ಕೇಂದ್ರಗಳಾದವು. ಹಬ್ಬ ಹುಣ್ಣಿಮೆಗಳನ್ನು ಆಚರಿಸುವುದರ ಜೊತೆಗೆ ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಆರಂಭವಾದವು.

ಇದರೊಂದಿಗೆ ಭಾಷೆ ತಾನಾಗಿ ಬಂದಿತು. ಈ ರೀತಿಯಲ್ಲಿ ಆಯಾ ಊರುಗಳಲ್ಲಿ ಹುಟ್ಟಿಬೆಳೆದ ಮುಂದಿನ ಪೀಳಿಗೆಗೂ ನಮ್ಮ ಭಾಷೆ ಸಂಸ್ಕೃತಿಯನ್ನು ಪರಿಚಯಿಸುವುದರಲ್ಲಿ ಈ ಸಂಘ ಸಂಸ್ಥೆಗಳು ಮುಖ್ಯ ಪಾತ್ರವನ್ನು ವಹಿಸಿದವು. ತಾಯಿನಾಡಿನಿಂದ ಬಂದ



ಸಚಿವ ಶ್ರೀ ವಸಂತ ಸಾಲಿಯಾನ್ ಹಾಗೂ ಸಚಿವೆ ರಾಣಿ ಸತೀಶ್ ಸಮಾವೇಶಕ್ಕೆ ಸಾಂಪ್ರದಾಯಿಕವಾಗಿ ಸ್ವಾಗತಿಸುತ್ತಿರುವುದು.

ಖ್ಯಾತ ವ್ಯಕ್ತಿಗಳನ್ನು ತಮ್ಮ ತಮ್ಮ ಸಂಘ ಸಂಸ್ಥೆಗಳಿಗೆ ಕರೆದು, ಸತ್ಕರಿಸುವ ಸಾಂಪ್ರದಾಯ ಬೆಳೆಯಿತು. ಇದರಿಂದ ತಾಯಿನಾಡಿನೊಡನೆ ಒಂದು ಸಾಂಸ್ಕೃತಿಕ ಬಾಂಧವ್ಯ ಬೆಳೆಯಿತು. ಜೊತೆಗೆ ಆಯಾ ಊರುಗಳಲ್ಲಿ ಈ ಸಂಘಗಳು ತಾಯಿನಾಡಿನ ಸಾಂಸ್ಕೃತಿಕ ರಾಯಭಾರಿಗಳಾಗಿ ಅಲ್ಲಿನ ಜನರಿಗೆ ನಮ್ಮ ಕಲೆ, ಸಂಸ್ಕೃತಿಯನ್ನು ಪರಿಚಯಿಸುವುದರಲ್ಲಿ ದೊಡ್ಡ ಪಾತ್ರವನ್ನು ವಹಿಸತೊಡಗಿದವು.

ಈ ಸಂಘ ಸಂಸ್ಥೆಗಳ ಚಟುವಟಿಕೆಗಳು ಇಷ್ಟಕ್ಕೇ ಸೀಮಿತಗೊಳ್ಳಲಿಲ್ಲ. ಇವರು ಶಾಲೆ, ಬ್ಯಾಂಕ್ ಇತ್ಯಾದಿಗಳನ್ನೂ ಪ್ರಾರಂಭಿಸಿದರು ಮತ್ತು ಸಮಾಜ ಸೇವೆಯಲ್ಲಿ ನಿರತರಾದರು. ತಮ್ಮದೇ ಆದ ಕಟ್ಟಡಗಳನ್ನು ಕಟ್ಟಿಕೊಂಡರು. ಎಲ್ಲಕ್ಕಿಂತ ಮುಖ್ಯವಾಗಿ, ಹೊರನಾಡಿನಲ್ಲಿ ತಮ್ಮ ಬಲದಿಂದಲೇ ಇವೆಲ್ಲವನ್ನೂ ಸಾಧಿಸಿದರು. ಹೊರನಾಡಿನ ಕನ್ನಡ - ಸಂಸ್ಕೃತಿ ಸಮಾವೇಶ ಇವರ ಸಾಧನೆಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಳ್ಳಲು ಒಂದು ಸದವಕಾಶವನ್ನು ಒದಗಿಸಿದೆ. ಮೊಟ್ಟಮೊದಲಿಗೆ ಬೆಂಗಳೂರಿನಲ್ಲಿ ನಡೆದ ಈ ಸಮಾವೇಶವನ್ನು ನಂತರ ಮಂಗಳೂರು, ಗೋವೆ ಇತ್ಯಾದಿ ಬೇರೆ ಬೇರೆ ಸ್ಥಳಗಳಲ್ಲಿ ನಡೆಸಿದ್ದಾರೆ.

ಈ ವರ್ಷದ ಸಮಾವೇಶವನ್ನು ಮುಂಬೈಯಲ್ಲಿ ನಡೆಸಬೇಕೆಂದು ತೀರ್ಮಾನಿಸಿದ್ದರಲ್ಲಿ ಒಂದು ವಿಶೇಷ ಕಾರಣವಿದೆ. ಕರ್ನಾಟಕದ ಹೊರಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರಿರುವ ಊರೆಂದರೆ ಮುಂಬೈ. ಇಲ್ಲಿನ ಕನ್ನಡಿಗರ ಸಂಖ್ಯೆ ಸುಮಾರು 18 ಲಕ್ಷವೆಂದು ಹೇಳುತ್ತಾರೆ. ಇಲ್ಲಿ 80ಕ್ಕೂ ಹೆಚ್ಚಿನ ಕನ್ನಡ ಸಂಸ್ಥೆಗಳಿವೆ. ಇವುಗಳಲ್ಲಿ ಅನೇಕ ಸಂಸ್ಥೆಗಳಿಗೆ ಬಂಗಾರಹಬ್ಬ, ಅಮೃತಮಹೋತ್ಸವ ಇತ್ಯಾದಿ ನಡೆದಿದೆ. ಒಂದು ಸಂಸ್ಥೆಗೆ ಶತಮಾನೋತ್ಸವವೂ ಆಗಿದೆ. ಈ ರೀತಿಯ ಹಿರಿಯ ಸಂಸ್ಥೆಗಳ ಜೊತೆಗೆ ಮುಂಬೈ ನಗರವು ಬೆಳೆದಂತೆ, ಉಪನಗರಗಳಲ್ಲಿ ಹೊಸ ಹೊಸ ಕನ್ನಡ ಸಂಘಗಳು ಹುಟ್ಟಿ, ಬೆಳೆಯುತ್ತಾ ಬಂದಿವೆ. ಕರ್ನಾಟಕ ಸರ್ಕಾರದೊಡನೆ, ಈ ಸಮಾವೇಶವನ್ನು ನಡೆಸಲು



ಸಚಿವೆ ರಾಣಿ ಸತೀಶ್ ಅವರಿಗೆ ಪುಷ್ಪಗುಚ್ಛ ನೀಡಿ ಗೌರವಿಸುತ್ತಿರುವುದು.



ಸಮಾವೇಶದ ಮೆರವಣಿಗೆಯಲ್ಲಿ ಕರ್ನಾಟಕ ಜಾನಪದ ನೃತ್ಯದ ಒಂದು ನೋಟ.

ಈ ಸಂಘಸಂಸ್ಥೆಗಳು "ಹೊರನಾಡ ಕನ್ನಡಿಗರ ಸಮಾವೇಶ ಸಮಿತಿ, ಮುಂಬೈ" ಎಂಬ ಒಂದು ಸಮಿತಿಯನ್ನು ಮಾಡಿಕೊಂಡು ಎಲ್ಲರೂ ಒಂದಾಗಿ ಮುಂದೆ ಬಂದರು. ಸಮಾವೇಶವನ್ನು ವಿಜೃಂಭಣೆಯಿಂದ ನಡೆಸುವುದು ಮತ್ತು ಮುಂಬೈಯಿನ ಕನ್ನಡಿಗರ ಸಾಧನೆಗಳನ್ನು ಈ ಸಮಾವೇಶದಲ್ಲಿ ಸಾದರ ಪಡಿಸುವುದೇ ಈ ಸಮಿತಿ ಮುಖ್ಯ ಗುರಿ.

ಈ ಸಮಾವೇಶಕ್ಕೆ ದೇಶದ ವಿವಿಧ ಭಾಗಗಳಿಂದ ಕನ್ನಡಿಗರು ಬಂದು ಭಾಗವಹಿಸಿದುದು ಬಹಳ ಸಂತೋಷದ ಸಂಗತಿ. ದೆಹಲಿ, ಅಹಮದಾಬಾದ್, ವಾರಣಾಸಿ, ಚೆನ್ನೈ, ಗೋವೆ, ಕಾಸರಗೋಡು ಇತ್ಯಾದಿ ಊರುಗಳಿಂದ ಕನ್ನಡಿಗರು ಸಮಾವೇಶಕ್ಕೆ ಬಂದಿದ್ದರು. ಈ ರೀತಿಯ ಒಂದು ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಮಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಕರ್ನಾಟಕದ ಕನ್ನಡ ಸಂಸ್ಕೃತಿ ಇಲಾಖೆಗೆ ನಾವು ಕೃತಜ್ಞರು.

ಮುಂಬೈನ ಹೊರನಾಡ ಕನ್ನಡಿಗರ ಬೃಹತ್ ಸಾಹಿತ್ಯ ಮತ್ತು ಸಂಸ್ಕೃತಿ ಸಮಾವೇಶವು ಜ. 3 ಮತ್ತು 4ರಂದು ಮುಂಬಯಿಯ ಉಪನಗರಾದ ವಡಾಲಾದಲ್ಲಿರುವ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಶಾಲೆಯ ಮೈದಾನದಲ್ಲಿ ವಿಜೃಂಭಣೆಯಿಂದ ಜರಗಿತ್ತು. ಸುಮಾರು 60 ಕನ್ನಡ ಸಂಘ ಸಂಸ್ಥೆಗಳು ಭಾಗವಹಿಸಿದ್ದ ಈ ಸಮಾವೇಶವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಅನೇಕ ರಾಜ್ಯಸ್ತರೀಯ ಅಕಾಡೆಮಿಗಳು ಹೊರನಾಡು ಕನ್ನಡ ಸಮಾವೇಶ ಸಮಿತಿಯೊಡನೆ ಜಂಟಿಯಾಗಿ ಆಯೋಜಿಸಿದ್ದವು.

ಮುಂಬಯಿಯ ಮಾಟುಂಗಾದಲ್ಲಿರುವ ಮೈಸೂರು ಅಸೋಸಿಯೇಷನ್‌ನಿಂದ ಆರಂಭಿಸಿ ವಡಾಲಾದ ಸಭಾಂಗಣದವರೆಗೆ ಜ. 3ರಂದು ಮಧ್ಯಾಹ್ನ 3ರ ವೇಳೆಗೆ ಹೊರಟ ಮೆರವಣಿಗೆಯಲ್ಲಿ ಸಂಸ್ಥೆಗಳ ಪದಾಧಿಕಾರಿಗಳೂ, ಸದಸ್ಯರೂ ಸೇರಿದ್ದರು. ಕರ್ನಾಟಕದಿಂದ ಬಂದಿದ್ದ ನಾದಸ್ವರ, ಕಹಳೆ ಕಲಾವಿದರೂ, ಪೂಜಾ ನೃತ್ಯದ ಕಲಾವಿದರು ಕೋಲಾಟದ ಕಲಾವಿದರು, ಲೇಜಿಮ್ ಕಲಾವಿದರು ಮುಂತಾದವರಿಂದ ಅನೇಕ ಕರ್ನಾಟಕದ ಜಾನಪದ ಕಲೆಗಳ ಮೆರವಣಿಗೆ ರಂಗೇರಿತ್ತು. ಈ ಸುಂದರ ದೃಶ್ಯ ಮುಂಬಯಿಗರಿಗೆ ಬಲು ಅಪರೂಪ, ದಾರಿಯುದ್ದಕ್ಕೂ ಜನ ಆನಂದಾತಿಶಯರಾಗಿ ನೋಡುತ್ತಾ ನಿಂತಿದ್ದರು.

ಸಭಾಂಗಣದ ಬಾಗಿಲಲ್ಲಿ ಆರತಿ ಎತ್ತಿ ಕಲಾವಿದರನ್ನೂ ಮೆರವಣಿಗೆಯ ಜನರನ್ನು ಸ್ವಾಗತಿಸಲಾಯಿತು. ರಂಗವಲ್ಲಿ, ತಳಿರುತೋರಣಗಳು, ಬಣ್ಣಬಣ್ಣದ ಛತ್ರಚಾಮರಗಳಿಂದ ಸಭಾಂಗಣ ಸುಂದರವಾಗಿ ಸಜ್ಜಾಗಿತ್ತು. ಕಾರ್ಯಕ್ರಮವು ರಾ.ಕ.ಶ.ಸ.ಯ ಶಾಲೆಯ ಮಕ್ಕಳಿಂದ ಗಣಪತಿ ವಂದನೆಯೊಂದಿಗೆ ಆರಂಭವಾಯ್ತು. ಶ್ರೀ ಎಸ್. ದೊರೆಸ್ವಾಮಿಯವರು ಹೊರನಾಡ ಕನ್ನಡಿಗರ ಸಮಾವೇಶ ಸಮಿತಿಯ ಪರವಾಗಿ ನೆರೆದಿದ್ದ ಸಭಿಕರನ್ನು ಸ್ವಾಗತಿಸಿದರು. ಶ್ರೀ ವೈ.ಕೆ. ಮುದ್ದುಕೃಷ್ಣ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ಸಮಾವೇಶದ ಔಚಿತ್ಯದ ಬಗ್ಗೆ ವಿವರಿಸಿ ಸಭಿಕರನ್ನು ಸ್ವಾಗತಿಸಿದರು. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಶ್ರೀಮತಿ ರಾಣಿ ಸತೀಶ್ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡೈರೆಕ್ಟರ್‌ರಾದ ವೈ. ಕೆ. ಮುದ್ದುಕೃಷ್ಣ ಅವರಿಂದ ನಾಡಗೀತೆಯ ಸಂಚಾಲನೆ.

ಕರ್ನಾಟಕ ಸರಕಾರದ ಮೀನುಗಾರಿಕೆ ಮತ್ತು ಬಂದರು ಇಲಾಖೆಯ ಮಂತ್ರಿಗಳಾದ ಶ್ರೀ ವಸಂತ ಸಾಲಿಯಾನರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಸಾಲಿಯಾನರು ತಾವೂ ಸಹ ಇದೇ ರಾ.ಕ.ಶಿ.ಸ.ಯ ಶಾಲೆಯಲ್ಲಿ ಕಲಿತುದುದನ್ನು ಹೆಮ್ಮೆಯಿಂದ ನೆನಪು ಮಾಡಿಕೊಂಡು ಮುಂಬಯಿ ತಮಗೆ ಪರಕೀಯವಲ್ಲವೆಂದೂ, ಹೊರನಾಡ ಕನ್ನಡಿಗರಿಗೆ ತಮ್ಮ ಕೈಲಾದ ಸಹಾಯ ಮಾಡಲು ಪ್ರಯತ್ನಿಸುವೆನೆಂದೂ ತಿಳಿಸಿದರು. ಶ್ರೀಮತಿ ರಾಣಿ ಸತೀಶ್ ಅವರು ಇಂದು ಬೆಳೆಯುತ್ತಿರುವ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಲ್ಲಿ ತಮ್ಮತನವನ್ನು ಉಳಿಸಿಕೊಳ್ಳಲು ನಮ್ಮ ಸಂಸ್ಕೃತಿಯ ಅರಿವು ನಮ್ಮ ಮುಂದಿನ ಪೀಳಿಗೆಯವರಿಗೆ ಮಾಡಿಕೊಡಲು ಇಂತಹ ಸಮಾವೇಶಗಳು ಅತ್ಯಾವಶ್ಯಕವಾಗಿವೆ ಎಂದರು ಮತ್ತು ಈ ಸಮಾವೇಶವನ್ನು ಆಯೋಜಿಸಿದ್ದಕ್ಕಾಗಿ ಮುಂಬಯಿನ ಕನ್ನಡಿಗರಿಗೆ ಹೃತ್ಪೂರ್ವಕವಾಗಿ



ಮೆರವಣಿಗೆಯಲ್ಲಿ ಕಂಗೀಲು ನೃತ್ಯ



ಮೈಸೂರು ಅಸೋಸಿಯೇಶನ್ ಕಲಾವಿದರಿಂದ ವಚನ ಸಾಹಿತ್ಯದ ಕಾರ್ಯಕ್ರಮ

ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಭೆಯಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ಶ್ರೀ ಬಿ. ಎನ್. ಶ್ರೀಕೃಷ್ಣ, ಶ್ರೀರಂಗರ ಪುತ್ರಿ ಶ್ರೀಮತಿ ಉಷಾ ದೇಸಾಯಿ, ಮಾಜಿ ಕುಲಪತಿಗಳಾದ ಶ್ರೀ ಶಿವಾನಂದ ಕೌಜಲಗಿ ಮತ್ತು ಶ್ರೀ ಪಾಟೀಲ್ ಪುಟ್ಟಪ್ಪರಂತ ಮಹನೀಯರು ಉಪಸ್ಥಿತರಿದ್ದರು. ಅನೇಕ ಕನ್ನಡ ಕಲಾವಿದರ ಚಿತ್ರಕಲೆಯ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಕನ್ನಡ ಪ್ರಾಧಿಕಾರದವರಿಂದ ಕನ್ನಡ ಪುಸ್ತಕಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಅನೇಕ ಸಂಘ ಸಂಸ್ಥೆಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಾದರಪಡಿಸಿದವು. ಇದಲ್ಲದೆ ಕನ್ನಡಿಗರ ಕೊಡುಗೆ ಎಂಬ ವಿಷಯದಲ್ಲಿ ಶಿಕ್ಷಣ ಉದ್ಯೋಗ, ವಾಣಿಜ್ಯ, ಸಂಸ್ಕೃತಿ ಮುಂತಾದ ಕ್ಷೇತ್ರದಲ್ಲಿ ವಿಶೇಷವಾಗಿ ಹೆಸರು ಮಾಡಿದ್ದ ಕನ್ನಡಿಗರ ಕೊಡುಗೆಯನ್ನು ಸ್ಮರಿಸಲಾಯಿತು.

ಹಾಗೆಯೇ ಮರಾಠಿ ಮತ್ತು ಕನ್ನಡ ಸಾಹಿತ್ಯ ಸಂಸ್ಕೃತಿಗಳ ತುಲನೆಯುನ್ನೂ, ಕೊಡುಕೊಳ್ಳುವಿಕೆಯನ್ನೂ ಚರ್ಚಿಸಲಾಯಿತು. ಎರಡನೆಯ ದಿನದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಲೋಕಸಭೆಯ ಅಧ್ಯಕ್ಷರಾದ ಮುಂಬಯಿಯವರೇ ಆದ ಶ್ರೀ ಮನೋಹರ ಜೋಶಿ ಆಗಮಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಭಾರತವು ಅನೇಕ ಭಾಷಿಕರ ರಾಷ್ಟ್ರವೆಂದೂ, ನಾವೆಲ್ಲರೂ ಮೊದಲಿಗೆ ಭಾರತೀಯರೆಂದೂ ಮಹಾರಾಷ್ಟ್ರಕ್ಕೆ ಬಂದು ನೆಲಸಿದ ಕನ್ನಡಿಗರಿಂದ ಅನೇಕ ಉತ್ತಮ ಕಾರ್ಯಗಳಾಗಿವೆಯೆಂದೂ ಅಭಿಪ್ರಾಯಪಟ್ಟರು. ಕನ್ನಡಿಗರು ಶಾಂತಿಪ್ರಿಯರೆಂದೂ, ಮರಾಠಿಯನ್ನು ಕಲಿತು ಮಹಾರಾಷ್ಟ್ರದವರೇ ಆಗಿ ಹೋಗಿದ್ದಾರೆಂದೂ ಹೇಳಿ ಮುಂದೆಯೂ ಈ ರೀತಿ ಸಮಾವೇಶಗಳು ನಡೆಯಬೇಕೆಂದರು.

ಈ ಎರಡು ದಿನದ ಕಾರ್ಯಕ್ರಮವು ದೇಶದ ನಾನಾ ಭಾಗಗಳಿಂದ ಬಂದಿದ್ದ ಕಲಾವಿದರೂ, ಕಾರ್ಯಕರ್ತರೂ ಸೇರಿದಂತೆ ೨೦೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರನ್ನು ಆಕರ್ಷಿಸಿತ್ತು. ಈ ಕಾರ್ಯಕ್ರಮಕ್ಕೆ ಪ್ರಸಾರ ಮಾಧ್ಯಮದಲ್ಲಿ ಸಾಕಷ್ಟು ಪ್ರಚಾರವನ್ನು ಕೊಡಲಾಗಿತ್ತು.

- ಎಂ.ಎ.ಎನ್. ಪ್ರಸಾದ್



ಬಿ.ಎಸ್.ಕೆ.ಬಿ. ಅಸೋಸಿಯೇಷನ್ ಮಹಿಳಾ ತಂಡದವರಿಂದ ಯಕ್ಷಗಾನದ ಒಂದು ದೃಶ್ಯ.



ಸಮಾವೇಶದ ಸಮರೋಪ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಲೋಕಸಭಾಧ್ಯಕ್ಷರಾದ ಶ್ರೀ ಮನೋಹರ ಜೋಷಿಯವರನ್ನು ರವಿ ರಾ. ಅಂಚನ್ ಹಾಗೂ ಸಮಾವೇಶದ ಪದಾಧಿಕಾರಿಗಳು ಸ್ವಾಗತಿಸುತ್ತಿರುವುದು.



ಬೆಂಗಳೂರು ತಂಡದವರಿಂದ ಪಂಪಭಾರತದ ನಾಟಕದ ದೃಶ್ಯ



ಶ್ರೀ ಮನೋಹರ ಜೋಶಿಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ.



ಸಮಾವೇಶದಲ್ಲಿ ಪುಸ್ತಕ ಪ್ರದರ್ಶನವನ್ನು ವೀಕ್ಷಿಸುತ್ತಿರುವ ಗಣ್ಯರು.

## THE MYSORE ASSOCIATION, BOMBAY
## FORTH COMING PROGRAMMES

| Date | Programme | Time | Venue |
|---|---|---|---|
| 10 Feb. 2004 | Ganesh Pooja & Sahasranaamaarchana | 7.00 p.m. | Ground Flr. |
| 17th Feb. 2004 | Ganesh Pooja & Sahasranaamaarchana | 7.30 p.m. | Ground Flr. |
| 18th Feb. 2004 | Mahashivratri Pooja & Bhajan | 7.30 p.m. | Ground Flr. |

**Indoor Tournments in Carrom, Chess and Table Tennis will be conducted kindly Register your names before 17th Feb. 2004**

## MATRIMONIAL

**1.** Alliance invited from well employed, Non - Bharadwaja, Kannada speaking Madhwa boys, preferably working in mumbai, for 25 years/5', wheatish compexion, Makha nakshatra.

**AND**

**2.** Alliance invited from well qualified, Non - Bharadwaja, Kannada speaking Madhwa girls for 27 years/ 5'10' boy working as a software engineer in Hyderabad, wheatish complexion, chitta nakshatra.

*Contact :*

Shri C.P.Raghavendra, 21, Venkatagiri, Anushakthi Nagar, Mumbai - 400 094. Tel. : 25570949

**3.** Seeking Brahmin boy working / studying in U.S.A for girl 26, 5'0" stidying P.H.D in genetics in UTA, UNI, USA, for the past two years. Smart, good looking, The girl is modern and has respect for Indian values Please contact :

R.L.Rao, Blue Diamond, Opp Mary Immaculate School, Navagaon, Dahisar (W) Mumbai -400 068 Tel. : 28314063 (R) 22023112 (O)

## ADYA RANGACHARYA SHATAMANOTSAVA SAMITI, MUMBAI
## THE MYSORE ASSOCIATION & KARNATAKA SANGHA, MUMBAI

*present*

### Adya Rangacharya Shatamanotsav Theatre Festival

**Adya Rangacharya's plays, Seminar, Exhibition of his photographs & works**

| Date | Time | Play | Language | Theatre Group & Director | Venue |
|---|---|---|---|---|---|
| 19.02.2004 | 7.15 p.m. | **Iyer Swargachiye Dwari** | Marathi | Bharath Natya Samshodhan Kendra, Pune Dir. Shri Avinash Umakanth Pathak | Mysore Association Auditorium |
| 20.02.2004 | 7.30 p.m. | **Nee Maayeyolago Ninnolu Maayeyo** | Kannada | Kala Bharathi of Karnataka Sangha, Mumbai, Dir. Shri Bharath Kumar Polipu | Mysore Association Auditorium |
| 21.02.2004 | 7.30 p.m. | **Siri Purandara** | Kannada | Prayoga Ranga, Bangalore Dir. Shri V. Ramamurthy | Mysore Association Auditorium |
| 22.02.2004 | 7.00 p.m. | **The Sanjivani Super Show** | English | "Out of Context", Mumbai Dir. Shri Ramu Ramanathan | Karnataka Sangha Auditorium |
| 23.02.2004 | 7.30 p.m. | **Yenu Bedali Ninna Balige Bandu** | Kannada | Fine Arts Section of The Mysore Association, Bombay Dir. Dr. B. R. Manjunath | Karnataka Sangha Auditorium |
| 24.02.2004 | 7.30 p.m. | **Suno Janamejaya** | Hindi | Avishkar, Mumbai Dir. Shri Deepak, Rajyadhyaksha | |

**Sponsors : Arghyam Bangalore, Sangeet Natak Ackademi, New Delhi, NSD Regional Resource Centre, Bangalore and Kannada & Culture Dept. Govt. of Karnataka**

***All are cordially invited***

***Kindly Collect Invitee Passes***

# ವ್ಯಾಖ್ಯಾನ ಭಾಸ್ಕರ - ಮತ್ತೂರು ಕೃಷ್ಣಮೂರ್ತಿ

ಭಾಗ - 1

ಮತ್ತೂರು ಕೃಷ್ಣಮೂರ್ತಿ ಅವರದು ಧೀಮಂತ ವ್ಯಕ್ತಿತ್ವ. ಅವರೊಬ್ಬ ಅಸಾಧಾರಣ ವಾಗ್ಮಿ. ಅವರದು ಬಹುಮುಖ ಪ್ರತಿಭೆ. ಇಪ್ಪತ್ತು ಮೂರು ವರ್ಷ ಲಂಡನ್‌ದಲ್ಲಿದ್ದು ಭಾರತೀಯ ಸಂಸ್ಕೃತಿಯನ್ನು ಪಾಶ್ಚಾತ್ಯ ಲೋಕಕ್ಕೆ ಪರಿಚಯಿಸಿದ ಸಾಂಸ್ಕೃತಿಕ ರಾಯಭಾರಿ ಅವರು ಮತ್ತೂರು ಅವರ ಜೀವನ ಸಾಧನೆಗಳನ್ನು ಐದಾರು ಕಂತುಗಳಲ್ಲಿ 'ನೇಸರು'ವಿನಲ್ಲಿ ಪ್ರಕಟಿಸಲಾಗುವುದು. ಡಾ. ಜಿ.ಎನ್. ಉಪಾಧ್ಯ ಅವರು ಈ ಲೇಖನ ಮಾಲೆಯನ್ನು ಸಿದ್ಧಪಡಿಸಿದ್ದಾರೆ.



ಈ ಪರಿಯ ಸೊಬಗಾವ ದೇವರಲಿ ನಾ ಕಾಣೆ ಎಂದು ದಾಸರು ಕೃಷ್ಣನನ್ನು ಕೊಂಡಿದ್ದಾರೆ. ಇದನ್ನೇ ತುಸು ಬದಲಿಸಿ 'ಈ ಪರಿಯ ಸೊಬಗಾದ ವಾಗ್ಮಿಗಳ ನಾ ಕಾಣೆ' ಎಂದು ಮತ್ತೂರು ಕೃಷ್ಣಮೂರ್ತಿ ಅವರಿಗೆ ಅನ್ವಯಿಸಿ ಹೇಳಬಹುದು. ಮತ್ತೂರು ಕೃಷ್ಣಮೂರ್ತಿ ಅವರು ಕನ್ನಡಿಗರಿಗೆ ಚಿರಪರಿಚಿತರು. ಅವರದು ನಾನಾಬಗೆಯ ವ್ಯಕ್ತಿತ್ವ, ಕಾದಂಬರಿಕಾರರಾಗಿ, ಪತ್ರಕರ್ತರಾಗಿ, ಸಂಘಟಕರಾಗಿ, ವಾಗ್ಮಿಯಾಗಿ ಅನುವಾದಕರಾಗಿ, ಗಾಂಧಿವಾದಿಯಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ ದೇಶ ವಿದೇಶಗಳಲ್ಲಿ ಕನ್ನಡದ ಕಂಪನ್ನು ಭಾರತೀಯ ಸಂಸ್ಕೃತಿಯ ಹಿರಿಮೆಗರಿಮೆಗಳನ್ನು ಸಾರಿ ಸೈ ಸೈ ಎನಿಸಿಕೊಂಡವರು.

ಕೃಷ್ಣಮೂರ್ತಿ ಅವರು 1929ರಲ್ಲಿ ಜನಿಸಿದರು. ಮೂಲತಃ ಅವರು ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮದವರು. ಬಾಲ್ಯದ ಶಿಕ್ಷಣ ಹುಟ್ಟೂರಲ್ಲೇ ಕಳೆಯಿತು. ಮನೆಯ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಚೆನ್ನಾಗಿರಲಿಲ್ಲ. ಬಾಲ್ಯದ ಶಿಕ್ಷಣದ ಜೊತೆಗೆ ಸಂಸ್ಕೃತ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದರು. ರಾಮಾಯಣ, ಮಹಾಭಾರತ, ಉಪನಿಷತ್ತು ಮೊದಲಾದ ಕೃತಿಗಳನ್ನು ಓದಿ ಅರಗಿಸಿಕೊಂಡರು. ಮತ್ತೂರು ಅವರು ಹೆಚ್ಚಿನ ಓದಿಗೆ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ಹೈಸ್ಕೂಲ್ ಸೇರಿದರು. ಕಷ್ಟದಲ್ಲೇ, ಆರ್ಥಿಕ ತೊಂದರೆಯಲ್ಲೇ ಮೆಟ್ರಿಕ್ ಮುಗಿಸಿದರು. ಗಾಂಧೀಜಿ ಅವರ ಸ್ವಾತಂತ್ರ್ಯ ಚಳುವಳಿಯ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲುಗೊಂಡರು.

ಮತ್ತೂರು ಅವರದು ಬಹುಭಾಷಿಕ ಸಂವೇದನೆ ಅನೇಕ ಭಾಷೆ ಸಾಹಿತ್ಯಗಳಲ್ಲಿ ಅವರಿಗೆ ಪ್ರವೇಶವಿದೆ. ಕನ್ನಡ, ಸಂಸ್ಕೃತ, ತಮಿಳು, ತೆಲುಗು, ಇಂಗ್ಲೀಷ್, ಹಿಂದಿ, ಸಂಕೇತಿ ಭಾಷೆಗಳಲ್ಲಿ ಅವರಿಗೆ ಒಳ್ಳೆಯ ಪ್ರಭುತ್ವವಿದೆ. ಬಹುಭಾಷೆಗಳನ್ನು ಕಲಿಯುವುದರ ಮೂಲಕ ರಾಷ್ಟ್ರೀಯ ಚಳುವಳಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಉತ್ತಮ ವಾಗ್ಮಿಯಾಗಿ ಜನಪ್ರಿಯರಾದರು.

ಕೃಷ್ಣಮೂರ್ತಿ ಅವರು ಚಿಕ್ಕಂದಿನಲ್ಲೇ ಉದ್ಯೋಗ ಅರಸಿ ಬೆಂಗಳೂರಿಗೆ ಬಂದರು. ಕೆಲಕಾಲ ಬಸ್‌ಕಂಡೆಕ್ಟರ್ ಆಗಿ ದುಡಿದರು. ಆನಂತರ ಬಟ್ಟೆಮಿಲ್ ಒಂದರಲ್ಲಿ ಕೆಲಸ ಮಾಡಿದರು. ಕೆಲವು ವರ್ಷ ಸಂಯುಕ್ತ ಕರ್ನಾಟಕದಲ್ಲಿ ಉಪಸಂಪಾದಕರಾಗಿ ದುಡಿದರು. ನಂತರ ಗಾಂಧಿ ಸಾಹಿತ್ಯ ಸಂಘದಲ್ಲಿ ಮತ್ತು ಆಕಾಶವಾಣಿಯಲ್ಲಿ ಮಕ್ಕಳ ನಾಟಕ ವಿಭಾಗದಲ್ಲಿ ಸೇವೆ ಸಲ್ಲಿಸಿದರು. ಚಿಕ್ಕವಯಸ್ಸಿನಲ್ಲೇ ಅವರು ಬರೆದ ಕಾದಂಬರಿಗಳು ಆ ಕಾಲದ ಪ್ರಸಿದ್ಧ ಪತ್ರಿಕೆಗಳಾದ ಪ್ರಜಾಮತ, ಸಂಯುಕ್ತ ಕರ್ನಾಟಕದಲ್ಲಿ ಬೆಳಕುಕಂಡು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾದುದು ಉಲ್ಲೇಖನೀಯ ಅಂಶ.

1969ರಲ್ಲಿ ಕೃಷ್ಣ ಮೂರ್ತಿ ಅವರು ಬೆಂಗಳೂರಿನ ಭಾರತೀಯ ವಿದ್ಯಾಭವನದ ನಿಬಂಧಕರಾಗಿ ಕೆಲಸ ಆರಂಭಿಸಿದರು. 1972ರಲ್ಲಿ ಲಂಡನ್‌ನಲ್ಲಿ ಭಾರತೀಯ ವಿದ್ಯಾಭವನದ ಕಾರ್ಯನಿರ್ವಾಹಕ ನಿರ್ದೇಶಕರಾದುದು ಅವರ ಕೃತುಶಕ್ತಿಗೆ ಸಂದ ಗೌರವ 23ವರ್ಷ ಲಂಡನ್‌ನಲ್ಲಿ ಅವರು ಭಾರತೀಯ ವಿದ್ಯಾಭವನದ ಮೂಲಕ ಸಾಂಸ್ಕೃತಿಕ ರಾಯಭಾರಿಯಂತೆ ಕೆಲಸಮಾಡಿದರು. ಭಾರತೀಯ ಸಂಸ್ಕೃತಿಯ ಔನ್ನತ್ಯವನ್ನು ಬ್ರಿಟಿಶ್ ಜನತೆಗೆ ಪರಿಚಯಿಸಿದ ಸಾಹಸಿ ಅವರು ಮತ್ತೂರು ಅವರು ಪ್ರತಿಷ್ಠಿತ ಬಿಬಿಸಿ ಚಾನೆಲ್‌ದಲ್ಲಿ ನೂರಕ್ಕಿಂತ ಹೆಚ್ಚು ಬಾರಿ ಹಿಂದೂಧರ್ಮ, ಸಂಸ್ಕೃತಿ, ಕಲೆ ಮೊದಲಾದ ವಿಷಯಗಳ ಕುರಿತು ಉಪನ್ಯಾಸ ಮಾಡಿ ದಾಖಲೆ ನಿರ್ಮಿಸಿದ್ದಾರೆ. ಬಿಬಿಸಿ ಸಂಸ್ಥೆ ತನ್ನ ವಜ್ರಮಹೋತ್ಸವದ ಸಂದರ್ಭದಲ್ಲಿ ಸಲ್ಲಿಸಿದ ಹಿಂದೂಧರ್ಮದ ಪ್ರಾರ್ಥನೆಯನ್ನು ಕೇಳಿ ಬ್ರಿಟಿಷ್ ರಾಣಿ ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ಅವರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ.

ಕೃಷ್ಣಮೂರ್ತಿ ಅವರು ಉತ್ತಮ ಅನುವಾದಕರೂ ಆಗಿದ್ದಾರೆ. ತಮಿಳುನಾಡಿನ ಪ್ರಸಿದ್ಧ ಸಾಹಿತಿಗಳಾದ ಕಲಿ, ಅಖಿಲನ್, ಕೌಸಲ್ಯಾ ನಾರಾಯಣ್, ಮೊದಲಾದವರ ಪ್ರಸಿದ್ಧ ಕಾದಂಬರಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಹಿಮಾಲಯದ ವೀರರು, ಕರ್ನಾಟಕ ಸಂಗೀತ ವಿದ್ವನ್ಮಣಿಗಳು, ಡಾ. ಜಾಕೀರ್ ಹುಸೇನ್, ಜವಾಹರಲಾಲ ನೆಹರು, ರಾಜೇಂದ್ರ ಪ್ರಸಾದ್, ಆಚಾರ್ಯ ವಿನೋಭಾಭಾವೆ ಅವರ ಜೀವನ ಚರಿತ್ರೆ ಉಪದೇಶಗಳನ್ನು ಕನ್ನಡಿಸಿದ್ದಾರೆ. ಮಹಾತ್ಮಾಗಾಂಧಿ ಅವರ ಬರಹಗಳನ್ನು ಅನುವಾದಿಸಿ 'ಗಾಂಧಿ ಉಪನಿಷತ್ತು' ಎಂಬ ಮಾಲಿಕೆಯಲ್ಲಿ ಐದು ಕೃತಿಗಳನ್ನು ತಂದು ಮಹದುಪಕಾರ ಮಾಡಿದ್ದಾರೆ. ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿಯ ಹನ್ನೊಂದು ಸಂಪುಟಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ತರುವ ಬೃಹತ್ ಯೋಜನೆಯಲ್ಲಿ ಅವರು ನಿರತರಾಗಿದ್ದಾರೆ. ಹತ್ತಾರು ಕೆಲಸ ಕಾರ್ಯಗಳ ನಡುವೆ 1995ರಿಂದ ಭಾರತೀಯ ವಿದ್ಯಾಭವನ ಹಾಗೂ ಎಂ.ಪಿ. ಬಿರ್ಲಾ ಫೌಂಡೇಶನ್‌ನ ನಿರ್ದೇಶಕರಾಗಿ ಸಾಂಸ್ಕೃತಿಕ ಪರಿಚಾರಿಕೆಯಲ್ಲಿ ಮಗ್ನರಾಗಿದ್ದಾರೆ.

(ಪುಟ 10ಕ್ಕೆ)

FOR ALL YOUR DOMESTIC
AND INTERNATIONAL
TRAVEL ARRANGEMENTS
CONTACT
AUGUST
TRAVEL
SERVICE
Agents For
INDIAN AIRLINES &
JET AIRLINES
REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV
ALSO AT :
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750

# ಸಾವರ್‌ಕರ್ ಜೀವನಕ್ರಮ

ಸಂಗ್ರಹಕರು : ಡಾ. ಎಂ. ಜಿ. ಶೆಟ್ಟಿ

[ವಿ. ಎಸ್. ಸಾವರ್‌ಕರ್ ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದ ಒಬ್ಬ ಧೀರೋದಾತ್ತ, ಅಷ್ಟೇ ವಿವಾದಾತ್ಮಕ ವ್ಯಕ್ತಿ. ಅವರ ಜೀವನ ಗಾಥೆಯ ಒಂದು ಕಿರು ನೋಟ]

| | |
|---|---|
| ಮೇ 28, 1883 | ಮಹಾರಾಷ್ಟ್ರ ರಾಜ್ಯದ ನಾಸಿಕ ಜಿಲ್ಲೆಯ ಭಗೋರ ಎಂಬ ಗ್ರಾಮದಲ್ಲಿ ಜನ್ಮ ತಾಳಿದರು. |
| 1892 | ತಾಯಿಯ ನಿಧನ |
| 1898 | ದೇಶದ ಮುಂದೆ ಸಶಸ್ತ್ರ ಕ್ರಾಂತಿಯ ಪ್ರತಿಜ್ಞೆ |
| ಸಪ್ಟೆಂಬರ್ 1899 | ತಂದೆಯ ನಿಧನ |
| ಜನೇವರಿ 1, 1900 | ಮಿತ್ರ ಮೇಳ ಸ್ಥಾಪನೆ |
| ಮಾರ್ಚ್ 1, 1901 | ವಿವಾಹ |
| ಡಿಸೆಂಬರ1901 | ಮೆಟ್ರಿಕ್ ಪರೀಕ್ಷೆ ಉತ್ತೀರ್ಣ |
| 1907 | ಪುಣೆಯಲ್ಲಿಯ ಫರ್ಗ್ಯೂಶನ ಮಹಾವಿದ್ಯಾಲಯದಲ್ಲಿ ಪ್ರವೇಶ |
| ಮೇ 1904 | ಅಭಿನವ ಭಾರತವೆಂಬ ಅಂತರ್ ರಾಷ್ಟ್ರೀಯ ಕ್ರಾಂತಿ ಸಂಸ್ಥೆಯ ಸ್ಥಾಪನೆ |
| ನವ್ಹೆಂಬರ 1905 | ವಿದೇಶ ಬಟ್ಟೆಗಳ ದಹನ |
| ಡಿಸೆಂಬರ 1905 | ಬಿ.ಎ. ಪರೀಕ್ಷೆ ಉತ್ತೀರ್ಣ |
| ಜೂನ್ 1906 | ಲಂಡನಗೆ ಪ್ರಯಾಣ |
| ಮೇ 10, 1907 | 1857ರ ಮೊದಲನೆಯ ಸ್ವಾತಂತ್ರ್ಯ ಯುದ್ಧದ ಸುವರ್ಣ ಮಹೋತ್ಸವ ಲಂಡನ್ನಿನಲ್ಲಿ ಆಚರಣೆ |
| ಜೂನ್ 1907 | ಮ್ಯಾಜಿನಿ ಪುಸ್ತಕ ಪ್ರಕಟಣೆ |
| ಮೇ 7, 1908 | ಲಂಡನ್ನಿನಲ್ಲಿ ಶಿವಾಜಿ ಜಯಂತಿ ಆಚರಣೆ |
| 1908 | ಹಾಲೆಂಡನ್ನಿನಲ್ಲಿ ಪ್ರಥಮ ಸ್ವಾತಂತ್ರ್ಯ ಸಮರ ಇಂಗ್ಲಿಷ ಪುಸ್ತಕಪ್ರಕಟನೆ. |
| ಮೇ 1909 | ಬ್ಯಾರಿಷ್ಟರ ಪರೀಕ್ಷೆ ಉತ್ತೀರ್ಣ ಆದರೆ ಪದವಿ ತಿರಸ್ಕಾರ |
| ಜೂನ್ 1909 | ಅಣ್ಣನಾದ ಶ್ರೀ ಬಾಬಾರಾವ್ ಇವರಿಗೆ ಜೀವಾವಧಿ ಕರಿನೀರಿನ ಶಿಕ್ಷೆ |
| ಜುಲೈ 1909 | ಮದನಲಾಲ ದೀಂಗ್ರಾ ಇವರಿಂದ ಕರ್ಜ ವಾಯ್ಲಿ ಇವರ ಹತ್ಯೆ. |
| ಅಕ್ಟೋಬರ್24,1909 | ಲಂಡನ್ನಿನಲ್ಲಿ ವಿಜಯ ದಶಮಿ ಉತ್ಸವ, ಅಧ್ಯಕ್ಷ ಗಾಂಧೀಜಿ |
| ಮಾರ್ಚ್ 13, 1910 | ಪ್ಯಾರಿಸನಿಂದ ಬಂದ ಮೇಲೆ ಬಂಧನ |
| ಜನವೇರಿ 31, 1911 | ಎರಡನೆ ಜೀವಾವಧಿ ಶಿಕ್ಷೆ |
| ಜುಲೈ 4, 1911 | ಅಂದಮಾನ ಜೇಲಿನಲ್ಲಿ ಶಿಕ್ಷೆಯಾರಂಭ |
| ಎಪ್ರಿಲ್ 1919 | ಅತ್ತಿಗೆ ಎಸುಬೈಣಿ ನಿಧನ |
| ನವ್ಹೆಂಬರ 1920 | ತಮ್ಮನಾದ ನಾರಾಯಣ ಜೇಲಿನಲ್ಲಿ ಭೆಟ್ಟಿ |
| ಮೇ 21, 1921 | ಬಾಬಾರಾವ ಹಾಗೂ ವಿನಾಯಕ ರಾವ ಅಂದಮಾನದಿಂದ ಹಿಂದೂಸ್ಥಾನಕ್ಕೆ ಕಳುಹಿಸುವುದು. |
| 1921, 1923 | ಅಲಿಪೂರ ರತ್ನಾಗಿರಿ ಜೇಲಿನಲ್ಲಿ |
| 1923 | ಮುಂಬಯಿಯ ರಾಜ್ಯಪಾಲರಾದ ಲಾಯಿಡ ಜಾರ್ಜರವರ ಸಾವರಕರ ಬಿಡುಗಡೆ ಬಗ್ಗೆ ಚರ್ಚೆ |
| ಜನವರಿ 6, 1924 | ರಾಜಕೀಯದಲ್ಲಿ ಭಾಗವಹಿಸದಿರುವುದು ಹಾಗೂ ರತ್ನಾಗಿರಿಯಲ್ಲಿ ಸ್ಥಾನ ಪದ್ಧತಿ ಇರುವುದು. ಈ ಎರಡು ಕಾರಣಗಳ ಮೇಲೆ ಬಿಡುಗಡೆ. |
| ಜನವರಿ 10, 1925 | ಪ್ರಭಾತ ಎಂಬ ಮಗಳ ಜನ್ಮ |
| ಜನವರಿ 10, 1925 | ಸ್ವಾಮಿ ''ಶ್ರದ್ಧಾನಂದ'' ಸ್ಮರಣಾರ್ಥ ಶ್ರದ್ಧಾನಂದ ಸಾಪ್ತಾಹಿಕ ಮುಂಬಯಿಯಲ್ಲಿ ಪ್ರಾರಂಭ |
| ಮಾರ್ಚ್ 1, 1927 | ರತ್ನಾಗಿರಿಯಲ್ಲಿ ಗಾಂಧೀಜಿ ಸಾವರಕರ ನಡುವೆ ಚರ್ಚೆ |
| ಮಾರ್ಚ್ 10, 1917 | ಪುತ್ರ 'ವಿಶ್ವಾಸ'' ಇವರ ಜನ್ಮ |
| ನವ್ಹೆಂಬರ 16, 1930 | ರತ್ನಾಗಿರಿಯಲ್ಲಿ ದೀನದಲಿತ ಬಂಧುಜನಗಳ ಜೊತೆಗೆ ಮೊದಲನೆಯ ಸಹಭೋಜನ. |
| ಫೆಬ್ರುವರಿ 22, 1931 | ಪತಿತ ಪಾವನ ಮಂದಿರಗಳ ಶ್ರೀ ಲಕ್ಷ್ಮೀನಾರಾಯಣ ಮೂರ್ತಿಗಳ ಪ್ರತಿಷ್ಠಾಪನೆ |
| 25, 1931 | ಮುಂಬಯಿಯಲ್ಲಿ ನಡೆದ ಅಸ್ಪೃಶ್ಯತೆ ನಿವಾರಣೆ ಅಧಿವೇಶನದ ಅಧ್ಯಕ್ಷತೆ |
| ಎಪ್ರಿಲ್ 26, 1931 | ಸೋಮವಂಶಿ ಹರಿಜನ ಪರಿಷದದ ಅಧ್ಯಕ್ಷತೆ ಹಾಗೂ ಪತಿತಪಾವನ ಮಂದಿರದಲ್ಲಿ ಸಭೆ. |
| ಸಪ್ಟೆಂಬರ್ 22, 1931 | ನೇಪಾಳ ರಾಜ್ಯ ಪುತ್ರ ಹೆಂಮಟಾದೂರ ಸಂಮೇಶರ ಅವರ ಭೆಟ್ಟಿ. |
| 27, 1931 | ಗಣೇಶ ಉತ್ಸವದಲ್ಲಿ ಭಂಗಿಯುವಕರಿಂದ ಕೀರ್ತನೆ ಹರಿಜನ ಯುವಕರಿಂದ ಗೀತಾಪಾಠ 75 ಅಸ್ಪೃಶ್ಯ ಮಹಿಳೆಯರ ಜೊತೆ ಸಹಭೋಜನ. |
| ಮೇ 10, 1937 | ರತ್ನಾಗಿರಿ ಸ್ಥಾನಬದ್ಧತೆಯಿಂದ ಬಿಡುಗಡೆ |
| ಡಿಸೆಂಬರ್ 30, 1937 | ಹಿ.ಮಾ. ಸಭೆಯ 19ನೆಯ ಅ. ಭಾ. ಅಧಿವೇಶನದ ಅಧ್ಯಕ್ಷ (ಕರ್ಣಾವತಿ) ಸತತ 7 ವರ್ಷ ಅ. ಭಾ.ಹಿ.ಮ. ಅಧ್ಯಕ್ಷ ಆಯ್ಕೆ. |
| ಎಪ್ರಿಲ್ 15, 1938 | ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನ 22 ಅಧಿವೇಶನದ ಅಧ್ಯಕ್ಷ ಮುಂಬಯಿ |
| ಫೆಬ್ರುವರಿ 1, 1939 | ನಿಜಾಮ ಸರಕಾರ ವಿರುದ್ಧ ''ಭಾಗ್ಯನಗರ'' ಆಂದೋಲನ ಪ್ರಾರಂಭ. |
| ಜೂನ್ 22, 1941 | ಸುಭಾಷಚಂದ್ರ ಭೋಸ ಸಾವರಕರ ಸದನದಲ್ಲಿ ಭೆಟ್ಟಿ |
| ಡಿಸೆಂಬರ 25, 1941 | ಬಾಗಲಪುರ ನಾಗರಿಕ ಸ್ವಾತಂತ್ರ್ಯ ಆಂದೋಲನ ಚಳುವಳಿ. |
| ಮೇ 28, 1943 | ಪುಣೆಯಲ್ಲಿ ನಾಗರಿಕರ ವತಿಯಿಂದ 61ನೇ ಹುಟ್ಟುಹಬ್ಬ ಆಚರಣೆ |
| ಆಗಸ್ಟ್ 14, 1943 | ನಾಗಪುರ ವಿಶ್ವವಿದ್ಯಾಲಯ ವತಿಯಿಂದ ಡಿ. ಲಿಟ್ ಸನ್ಮಾನ ಪದವಿ ಪ್ರಧಾನ. |
| ನವ್ಹೆಂಬರ 5, 1943 | ಅಖಿಲ ಮಹಾರಾಷ್ಟ್ರ ನಾಟ್ಯ ಶತಾಬ್ದಿ ಮಹೋತ್ಸವ ಅಧ್ಯಕ್ಷ (ಸಾಂಗ್ಲೀ) |
| ಮಾರ್ಚ್ 16, 1945 | ಅಣ್ಣ ಶ್ರೀ ಬಾಬಾರಾವ ನಿಧನ |
| ಎಪ್ರಿಲ್ 19, 1945 | ಅ.ಭಾ. ಹಿಂದೂ ಸಭಾ ಅಧಿವೇಶನ ಅಧ್ಯಕ್ಷ (ಬಡೋದಾ) |
| ಮೇ 8, 1945 | ಕನ್ಯಾ ''ಪ್ರಭಾತ''ಳ ವಿವಾಹ. ಪುಣೆ. |
| ಎಪ್ರಿಲ್ 1946 | ಮುಂಬಯಿ ಸರಕಾರವು ಸಾವರಕರ ಸಾಹಿತ್ಯ ಮೇಲಿನ ಎಲ್ಲ ಬಂಧನವನ್ನು ತೆಗೆದು ಹಾಕಿತು. |
| ಆಗಸ್ಟ್ 15, 1947 | ಸಾವರಕರ ಸದನದ ಮೇಲೆ ಭಗವಾ ಧ್ವಜ ಹಾಗೂ ರಾಷ್ಟ್ರ ಧ್ವಜ ಹಾರಿಸಿದರು. |
| ಫೆಬ್ರುವರಿ 5, 1948 | ಗಾಂಧೀ ಹತ್ಯೆಯಾದ ಮೇಲೆ ಸುರಕ್ಷಾ ಕಾಯ್ದೆ ಮೇಲೆ ಬಂಧನ |
| ಫೆಬ್ರುವರಿ 10, 1949 | ಗಾಂಧೀ ಹತ್ಯೆಯ ಅಭಿಯೋಗದಿಂದ ನಿರಪರಾಧಿಯಾಗಿ ಬಿಡುಗಡೆ. |
| ಫೆಬ್ರುವರಿ 19, 1949 | ತಮ್ಮ ನಾರಾಯಣರಾವ ನಿಧನ |
| ಡಿಸೆಂಬರ್ 1949 | ಅ.ಭಾ.ಹಿ. ಮ. ಕಲ್ಕತ್ತೆ ಅಧಿವೇಶನದ ಉದ್ಘಾಟಕ |
| ಎಪ್ರಿಲ್ 1950 | ಪಾಕಿಸ್ತಾನ ಪಂತ ಪ್ರಧಾನಿ ಲಿಯಾಕತ ಅಲಿ ದಿಲ್ಲಿ ಭೇಟಿ ಸಮಯದಲ್ಲಿ ಬಂಧನ ಹಾಗೂ ಬೆಳಗಾವ ಕಾರಾಗ್ರಹದಲ್ಲಿ ಬಂಧನ. |
| ಮೇ 10-12, 1952 | ಅಭಿನವ ''ಭಾರತ'' ಸಂಸ್ಥೆಯ ಸಮಾರೋಹ ಸಮಾರಂಭ ಪುಣೆ. |
| ಫೆಬ್ರುವರಿ 1955 | ರತ್ನಾಗಿರಿಯ ಪತಿತಪಾವನ ಮಂದಿರದ ಸುವರ್ಣ ಮಹೋತ್ಸವದ ಅಧ್ಯಕ್ಷ |
| ಜುಲೈ 23, 1956 | ಅ.ಭಾ.ಹಿ.ಮ. ಸಭಾ ಜೋಧಪುರ ಅಧಿವೇಶನದ ಉದ್ಘಾಟಕ |
| ಮೇ 10, 1957 | ದಿಲ್ಲಿಯಲ್ಲಿ 1857 ರ ಸ್ವತಂತ್ರ ಯುದ್ಧದ ಶತಾಬ್ದಿ ಮಹೋತ್ಸವ ಭಾಷಣ. |
| ಮೇ 28, 1958 | ಮುಂಬಯಿ ಮಹಾಪಾಲಿಕೆಯ ವತಿಯಿಂದ 75ನೇ ಹುಟ್ಟು ಹಬ್ಬದ ಸತ್ಕಾರ. |
| ಅಕ್ಟೋಬರ್ 8, 1959 | ಪುಣೆ ವಿಶ್ವವಿದ್ಯಾಲಯ ಡಿ.ಲಿಟ್ ಸನ್ಮಾನ ಪದವಿ ಪ್ರದಾನ. |
| ಡಿಸೆಂಬರ್ 24,1959 | ಮೃತ್ಯುಂಜಯ ದಿನವನ್ನು ಆಚರಿಸಲಾಯಿತು. |
| ಜನವರಿ 14, 1961 | ಮೃತ್ಯುಂಜಯ ದಿನ ನಿಮಿತ್ತ ಕಡೆ ಭಾಷಣ (ಪುಣೆ) |
| ಎಪ್ರಿಲ್ 15, 1962 | ಮುಂಬಯಿಯ ರಾಜ್ಯಪಾಲ ಶ್ರೀ ಪ್ರಕಾಶ ಮನೆಯಲ್ಲಿ ಭೆಟ್ಟಿ |
| ಮೇ 29, 1963 | ಕಾಲಿನ ಮೂಳೆಮುರಿದು ಆಸ್ಪತ್ರೆಯಲ್ಲಿ (ಮುಂಬಯಿ) |
| ನವ್ಹೆಂಬರ 8, 1963 | ಪತ್ನಿ ಸೌ. ಯಮುನಾಬಾಯಿ ನಿಧನ. |
| ಆಗಸ್ಟ್ 1, 1964 | ಮೃತ್ಯುಪತ್ರಮಾಡಿದರು. |
| ಅಕ್ಟೋಬರ್ 1964 | ಭಾರತ ಸರಕಾರದಿಂದ ಮಾಸಿಕ ರೂಪಾಯಿ 300 ಕೊಟ್ಟು ಸನ್ಮಾನಿಸಲಾಯಿತು. |
| ಸಪ್ಟೆಂಬರ 1965 | ಅವರ ಪ್ರಕೃತಿ ಗಂಭೀರ |
| ಫೆಬ್ರುವರಿ 1, 1966 | ಸಾಯುವವರೆಗೆ ಅನ್ನ ಮತ್ತು ಔಷಧ ನಿರಾಕರಣೆ. |
| ಫೆಬ್ರುವರಿ 26, 1966 | ಶನಿವಾರ ಬೆಳಿಗ್ಗೆ 11-15 ಗಂಟೆಗೆ ನಿಧನ. ವಯಸ್ಸು 83 |
| ಫೆಬ್ರುವರಿ 27, 1966 | ಮುಂಬಯಿಯ ಚಂದನವಾಡಿ ಸ್ಮಶಾನದಲ್ಲಿ ಅಗ್ನಿ ಸಂಸ್ಕಾರ. |

# ಭಾರತೀಯ ಕಲೆ

ಭಾಗ - 21

> ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

ವಿಜಯ ನಗರದ ಕಾಲ ಮತ್ತು ನಾಯಕರು

ಚೋಳರ ಅವನತಿಯ ನಂತರ ದಕ್ಷಿಣ ಭಾರತದ ಕಲಾವಿದರು ತಮ್ಮ ಪೋಷಕರನ್ನು ಕಳೆದುಕೊಂಡರು. ಸ್ವಲ್ಪ ಕಾಲದವರೆಗೆ ನಿರ್ಗತಿಕರಾಗಬೇಕಾಯಿತು. ಅನತಿ ಕಾಲದಲ್ಲೇ ಕ್ರಿ.ಶ. ೧೩೩೬ರಿಂದ ೧೫೬೫ರ ವರೆಗೆ ಆಳಿದ ವಿಜಯನಗರ ಸಾಮ್ರಾಜ್ಯವನ್ನು ಸಂಗಮನ ಮಕ್ಕಳಾದ ಹರಿಹರ, ಕಂಪ ಮತ್ತು ಬುಕ್ಕ ಇವರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇವರ ಈ ಮಹತ್ಕಾರ್ಯಕ್ಕೆ ವಿದ್ಯಾರಣ್ಯರು ಬೆಂಬಲ ನೀಡಿದರು. ವಿಜಯನಗರದ ಅರಸರು ಎಲ್ಲಾ ಕಲೆಗಳಿಗೆ ಆಶ್ರಯದಾತರು ಮಾತ್ರ ಆಗಿರದೆ, ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಶ್ರಮಿಸಿದರು. ವಿಜಯ ನಗರದ ಅರಸರು ವೈಷ್ಣವ ಧರ್ಮಕ್ಕೆ ಒಲವು ತೋರಿಸಿದ್ದರಿಂದ ಅವರ ಕಾಲದಲ್ಲಿಯ ಶಿಲ್ಪಗಳಲ್ಲಿ ಹೆಚ್ಚಿಗೆ ವಿಷ್ಣುವಿನ ದಶಾವತಾರ, ಕೃಷ್ಣನ ಬಾಲಲೀಲೆಗಳು ಮತ್ತು ಮಹಾಕಾವ್ಯಗಳಿಂದ ಆಯ್ದ ದೃಶ್ಯಗಳನ್ನು ಕೆತ್ತಿಸಿದರು. ಗುಡಿಗಳ ಗೋಡೆಗಳಲ್ಲಿ, ಮಂಟಪಗಳ ಕಂಬಗಳಲ್ಲಿ ಉಬ್ಬು ಚಿತ್ರಗಳ ಮೂಲಕ ಮೇಲೆ ಹೇಳಿದ ಶಿಲ್ಪಾಕೃತಿಗಳನ್ನು ರಚಿಸಿದರು.

ವಿಜಯನಗರದ ಶಿಲ್ಪಗಳು ಬಹಳಷ್ಟು ಸಾಮಾಜಿಕ ಚಟುವಟಿಕೆಗಳನ್ನೇ ಪ್ರತಿನಿಧಿಸುತ್ತವೆ. ಕೋಲಾಟ, ನೃತ್ಯ ಮತ್ತು ಬೇಟೆಯಾಡುವುದು ಮುಂತಾದ ದೃಶ್ಯಗಳನ್ನು ಶಿಲ್ಪಗಳಲ್ಲಿ ಸೆರೆಹಿಡಿಯಲಾಗಿದೆ. ಕೆಲವು ಅಂಕಣಗಳಲ್ಲಿ ಅನೇಕ ಬಗೆಯ ಪಕ್ಷಿ ಮತ್ತು ಪ್ರಾಣಿಗಳನ್ನು ಕೆತ್ತಲಾಗಿದೆ. ಬಳ್ಳಿಗಳು ಮತ್ತು ಹೂಗಳನ್ನು ಶಿಲ್ಪಗಳ ಸುತ್ತಲೂ ಅಲಂಕಾರದ ದೃಷ್ಟಿಯಿಂದ ಚಿತ್ರಿಸಲಾಗಿದೆ. ವಿಜಯನಗರದ ಸಾಂಪ್ರದಾಯಿಕ ಶಿಲ್ಪಕಲೆಯು ಪಲ್ಲವರ ಮತ್ತು ಚೋಳರ ಕೆತ್ತನೆಗಳಲ್ಲಿ ಕಾಣುವ ಸಹಜ ಸೌಂದರ್ಯವನ್ನು ಕಳೆದುಕೊಂಡಿತ್ತು. ಆಕೃತಿಗಳಲ್ಲಿ ಒರಟುತನ ಕಂಡುಬರುವುದಲ್ಲದೇ, ಮುಖಲಕ್ಷಣಗಳಲ್ಲಿ ಯಾವ ವಿಧದ ಭಾವವೂ ಕಾಣಿಸುವುದಿಲ್ಲ. ಚೂಪಾದ ಮೂಗುಗಳು ಸಹಜ ಸೌಂದರ್ಯಕ್ಕೆ ಅಡ್ಡಿಯಾದಂತೆ ಭಾಸವಾಗುತ್ತದೆ. ಉಡುಪು, ಆಭರಣಗಳು ಮತ್ತು ಅಲಂಕಾರ ಚೋಳರ ಕಾಲಕ್ಕಿಂತಲೂ ಹೆಚ್ಚು ವಿಸ್ತೃತವಾಯಿತು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪೆಯಲ್ಲಿ ಅತ್ಯುತ್ತಮವಾದ ಶಿಲ್ಪಗಳನ್ನು ಹಿಂದೂ ದೇವತೆಗಳ ಮೂರ್ತಿ ಶಿಲ್ಪಗಳ ಆಕಾರದಲ್ಲಿ ಕೆತ್ತಲ್ಪಟ್ಟವು. ಆದರೆ ಮುಸ್ಲಿಂ ಆಕ್ರಮಣಕಾರರ ಅಮಾನುಷ ದಾಳಿಗೆ ಈ ರಾಜಧಾನಿಯು ತುತ್ತಾಗಿ ಹೇರಳವಾದ ಕಲಾಕೃತಿಗಳು ಸಂಪೂರ್ಣವಾಗಿ ನಾಶಗೊಂಡವು. ಪೋರ್ಚುಗೀಸ್ ಯಾತ್ರಿಕನಾದ 'ಪಯೆಸ್'ನ ಬರವಣಿಗೆಗಳಲ್ಲಿ ವಿಜಯನಗರ ಸಾಮ್ರಾಜ್ಯವು ಕೃಷ್ಣದೇವರಾಯನ ಕಾಲದಲ್ಲಿ ಹೇಗೆ ತನ್ನ ಸುವರ್ಣ ಯುಗವನ್ನು ಪಡೆದಿತ್ತೆಂಬುದನ್ನು ವಿಶದವಾಗಿ ವಿವರಿಸಿದ್ದಾನೆ. ಈಗ ಹಂಪೆಯಲ್ಲಿ ಉಳಿದಿರುವ ಸ್ಮಾರಕ ಶಿಲ್ಪಗಳೆಂದರೆ ಹಜಾರ ರಾಮನ ದೇವಸ್ಥಾನ, ವಿಜಯ ವಿಠಲ ದೇವಸ್ಥಾನ ಮತ್ತು ಅರಮನೆಯ ಅಳಿದುಳಿದ ಕೆಲವು ಭಾಗಗಳು. ಕಮಲ್ ಮಹಲ್, ರಾಣಿ ಸ್ನಾನಾಗಾರ ಮುಂತಾದ ಕಟ್ಟಡಗಳನ್ನು ನೋಡಿದಾಗ ವಾಸ್ತುಶಿಲ್ಪವು ಆಗಲೇ ಇಸ್ಲಾಮಿಕ್ ಪ್ರಭಾವವನ್ನು ಹೊಂದಿತ್ತೆಂಬುದು ತಿಳಿಯುತ್ತದೆ.

ವಿಜಯ ವಿಠಲ ದೇವಸ್ಥಾನದಲ್ಲಿ ನೆಲಮಾಳಿಗೆ, ಮಂಟಪ, ಕಲ್ಯಾಣ ಮಂಟಪ ಮತ್ತು ಕಲ್ಲಿನ ರಥ ಮುಂತಾದವುಗಳನ್ನು ನಾವು ಮುಖ್ಯವಾಗಿ ಗಮನಿಸಬೇಕು. ಕಲ್ಲಿನ ರಥವು ದೇವಸ್ಥಾನದ ಅಂಗಳದಲ್ಲಿ ಪ್ರತ್ಯೇಕವಾಗಿ ನಿಲ್ಲಿಸಲ್ಪಟ್ಟಿದೆ. ರಥದ ನಾಲ್ಕೂ ಚಕ್ರಗಳನ್ನು ಹೂಗಳ ಚಿತ್ರಗಳಿಂದ ಅಲಂಕರಿಸಲಾಗಿದೆ. ಗುಂಬ ತಿರುಗುವ ಗಾಲಿಯ ಮಧ್ಯಭಾಗದಲ್ಲಿ ಕಮಲದ ಹೂವನ್ನು ಕೆತ್ತಲಾಗಿದೆ. ಚಕ್ರಗಳು ನಿಂತಿರುವ ತಳಪಾಯದ ಸುತ್ತಲೂ ಬೇಟೆಯಾಡುವ ದೃಶ್ಯಗಳನ್ನು ಚಿತ್ರಿಸಲಾಗಿದೆ. ಜೀವ ಕಳೆಯಿಂದ ಕಾಣಿಸುತ್ತಿರುವ ಒಂದು ಜೊತೆ ಆನೆಗಳು ರಥದ ಪ್ರವೇಶದ್ವಾರವನ್ನು ಕಾಯುತ್ತಿರುವ ಹಾಗೆ ಸುಂದರವಾಗಿ ಕೆತ್ತಲಾಗಿದೆ.

ಮಂಟಪದಲ್ಲಿ ಸ್ತಂಭಗಳು ಬೇರೆ ಬೇರೆ ಪ್ರಮಾಣಗಳಲ್ಲಿ ಟೊಳ್ಳನ್ನು ಹೊಂದಿರುವುದರಿಂದ ಅವರು ಬಡಿದಾಗ ಸಂಗೀತ ಸಪ್ತಸ್ವರಗಳು ಸುಮಧುರವಾಗಿ ಹೊರಡುತ್ತವೆ. ಇಲ್ಲಿಯ ಶಿಲ್ಪಗಳು ಬೇಲೂರು, ಹಳೇಬೀಡಿನ ಶಿಲ್ಪಗಳ ಹಾಗೆ ನಯನಾಜೂಕು ಹೊಂದಿರುವುದಿಲ್ಲ. ಕಾರಣವೇನೆಂದರೆ ಇಲ್ಲಿ ಕೆತ್ತನೆಗೆ ಬಳಸಿದ ಶಿಲೆಯು ಬೆಣಚುಕಲ್ಲು ಆಗಿದ್ದು ಸೂಕ್ಷ್ಮ ಕೆತ್ತನೆಗಳಿಗೆ ಸರಿಯೆನಿಸುವುದಿಲ್ಲ. ಇಂತಹ ತೊಂದರೆ ಇದ್ದರೂ ಇಲ್ಲಿಯ ಶಿಲ್ಪಿಗಳು ಕೆಲವು ಸುಂದರ ಮೂರ್ತಿ ಶಿಲ್ಪಗಳನ್ನು ರಚಿಸಿದ್ದರು. ಆದರೆ ಅವೆಲ್ಲವೂ ಈಗ ಕಾಣೆಯಾಗಿವೆ.

ವಿಜಯನಗರ ಕಾಲದ ಶಿಲ್ಪಕಲೆ ಅವಶೇಷಗಳನ್ನು ಮಾತ್ರ ನಾವು ಹಂಪೆಯಲ್ಲಿ ಕಾಣುತ್ತೇವೆ. ಆದರೆ ಹೊರಪ್ರಾಂತಗಳಲ್ಲಿ ಈ ಕಾಲದ ಶಿಲ್ಪಕಲೆಯು ಹರಡಿತ್ತಲ್ಲದೆ, ಅಂದು ನಿರ್ಮಿಸಲ್ಪಟ್ಟಿದ್ದ ಶಿಲ್ಪಕಲಾಕೃತಿಗಳು ಇಂದಿಗೂ ಉಳಿದುಕೊಂಡಿರುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ, ಕಾಂಚಿಪುರಂನ ವರದರಾಜ ಸ್ವಾಮಿ ಗುಡಿಯ ನೂರು ಕಂಬಗಳ ಮಂಟಪದಲ್ಲಿ ಕಂಬಗಳ ಮೇಲೆ ಹಿಂಗಾಲುಗಳ ಮೇಲೆ ಎದ್ದು ನಿಂತಿರುವ ಕುದುರೆಗಳು, ಗ್ರಿಫಿನ್ ಪ್ರಾಣಿಗಳು ಮತ್ತು ಸವಾರರು ಮುಂತಾದ ಶಿಲ್ಪಚಿತ್ರಗಳು ಶಿಲ್ಪಿಗಳ ಪ್ರಾವೀಣ್ಯತೆಯನ್ನು ಇಂದಿಗೂ ವ್ಯಕ್ತಪಡಿಸುತ್ತವೆ.

ವೆಲ್ಲೂರಿನಲ್ಲಿ ಕೋಟೆ ದೇವಸ್ಥಾನವಾದ ಜಲಕಂಠೇಶ್ವರ ದೇವಾಲಯದ ಕಲ್ಯಾಣ ಮಂಟಪದಲ್ಲಿ ವಿಜಯನಗರ ಮತ್ತೊಂದು ಉತ್ತಮ ಕೊಡುಗೆಯನ್ನು ವಿವರಿಸಬಹುದು. ಬೇಟೆಯಾಡುವ ದೃಶ್ಯಗಳು, ಬೇಟೆಯಾಡಲು ಉಪಯೋಗಿಸಿದ ಕುದುರೆಗಳ ಓಟ, ಸವಾರರು ಬೇಟೆಯಾಡುವ ರೀತಿ, ಬೇಟೆಗಾರರ ಬಾಣಗಳಿಗೆ ಸಿಕ್ಕು ತತ್ತರಿಸುವ ಪ್ರಾಣಿಗಳು ಮುಂತಾದ ದೃಶ್ಯಗಳನ್ನು ಶಿಲ್ಪಗಳ ಮೂಲಕ ತುಂಬಾ ಸೊಗಸಾಗಿ ವಿವರಿಸಲಾಗಿದೆ.

ಕ್ರಿ.ಶ. ೧೫೬೫ರಲ್ಲಿ ತಾಳೀ ಕೋಟೆಯ ಯುದ್ಧದ ನಂತರ ವಿಜಯನಗರವು ಸಾಮ್ರಾಜ್ಯವು ನಾಶವಾಯಿತು. ಸಾಮ್ರಾಜ್ಯದ ಆಧೀನದಲ್ಲಿದ್ದ ನಾಯಕರು ಸ್ವತಂತ್ರರಾದರಲ್ಲದೆ, ಚಿಕ್ಕ ಚಿಕ್ಕ ರಾಜ್ಯಗಳನ್ನು ರಚಿಸಿಕೊಂಡರು. ಕೆಲವು ನಾಯಕರು ವಿಜಯನಗರದ ಅರಸರ ಸಂಸ್ಕೃತಿ, ಕಲೆಗಳನ್ನೇ ಮುಂದುವರೆಸಿದರು. ಕಲಾವಿದರಿಗೆ ಪ್ರೋತ್ಸಾಹ ನೀಡಿದರು. ಶ್ರೀರಂಗಂನ ರಂಗನಾಥ ಸ್ವಾಮಿ ದೇವಾಲಯದ ಕುದುರೆ ನ್ಯಾಯಸ್ಥಾನವು ಈ ನಾಯಕರ ಶಿಲ್ಪಕಲೆಯು ಹರಡಿರುವುದಕ್ಕೆ ಉದಾಹರಣೆಯಾಗಿದೆ. ಅದೇ ದೇವಾಲಯದಲ್ಲಿರುವ ವೇಣುಗೋಪಾಲ ಸ್ವಾಮಿಯ ಪ್ರತಿಮೆಯು ತುಂಬಾ ಸೊಗಸಾದ ಕೆತ್ತನೆಯಿಂದ ಕೂಡಿದೆ. ಮಧುರೆಯ ಮೀನಾಕ್ಷಿ ದೇವಾಲಯದ ಸಹಸ್ರ ಕಂಬ ಮಂಟಪ, ತಿರುಮಲೆ ನಾಯಕರ ಪುದುಮಂಟಪಂ, ಮೀನಾಕ್ಷಿ, ಸುಂದರೇಶ್ವರರ ಕಲ್ಯಾಣ, ಕಂಬತ್ತಡಿ ಮಂಟಪಂ ಇವೆಲ್ಲವೂ ನಾಯಕರು ಕೂಡ ವಿಜಯನಗರ ಶೈಲಿಯ ಶಿಲ್ಪಕಲೆಯನ್ನು ವಿಸ್ತರಿಸುವುದಕ್ಕೆ ಸಾಕ್ಷಿಯಾಗಿವೆ.



ಕುಂಭಕೋಣಂನಲ್ಲಿ ರಾಮಸ್ವಾಮಿ ದೇವಸ್ಥಾನದ ಶಿಲ್ಪಗಳೂ ಕೂಡ ಇದೇ ಶೈಲಿಗೆ ಸೇರಿದ್ದಾಗಿವೆ. ಈ ಕಾಲದ ಆಕೃತಿಗಳು ಒರಟಾಗಿ ಕಂಡುಬಂದರೂ ಒಂದು ಬಗೆಯ ಸೌಂದರ್ಯದ ಲೇಪವನ್ನು ಹೊಂದಿವೆ ಎಂದು ಹೇಳಬಹುದು. ನಿಟ್ಟಿಸುವ ಕಣ್ಣುಗಳು, ವಕ್ರ ಹುಬ್ಬುಗಳು, ಚಪ್ಪಟೆಯ ತ್ರಿಕೋಣಾಕಾರದ ಮೂಗು, ಕೆಳತುಟಿಗಿಂತ ಚಿಕ್ಕದೆನಿಸುವ ಮೇಲ್ತುಟಿ, ಅಗಲ ತೋಳುಗಳು, ಗಟ್ಟಿಯಾದ ಕಾಲುಗಳು ಮುಂತಾದುವು ಗಮನಿಸತಕ್ಕ ಅಂಶಗಳು. ಉಡುಗೆ ಪಾರದರ್ಶಕವಾಗಿದ್ದು, ನಡುವಿನ ಮೇಲ್ಗಡೆಯಿಂದ ಕಟ್ಟಿರುವಂತೆ ಕೆತ್ತಲ್ಪಟ್ಟಿವೆ. ಆಭರಣಗಳ ಅಲಂಕಾರವೂ ಸಾಕಷ್ಟು ಸುಂದರವಾಗಿ ಕಾಣಿಸುತ್ತದೆ.

ಆಧುನಿಕ ಶಿಲ್ಪಕಲೆ

ನಮ್ಮ ದೇಶವನ್ನು ಬ್ರಿಟಿಷರು ಆಳುತ್ತಿದ್ದುದರಿಂದ ಅವರ ಪ್ರಭಾವ ಎಲ್ಲಾ ಕ್ಷೇತ್ರಗಳಲ್ಲೂ ಆಯಿತು. ಅವರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದವರು ಕ್ರಮೇಣ ಇಲ್ಲಿ ನೆಲೆಯೂರಿದರು. ಇದರಿಂದ ಅವರ ಸಂಸ್ಕೃತಿಯು ಎಲ್ಲಾ ಕಡೆ ಪ್ರಚಾರಕ್ಕೆ ಬಂದಿತು. ಕಲೆಯಲ್ಲೂ ಸಹ ಬ್ರಿಟಿಷ್ ಶಿಕ್ಷಣ ಪದ್ಧತಿ ಬಳಕೆಗೆ ಬಂದಿತು. ಭಾರತದಲ್ಲಿ ಶಿಲ್ಪಕಲೆ ಒಂದು ಸಾಂಪ್ರದಾಯಿಕ ನೆಲೆಗಟ್ಟಿನ ಮೇಲೆ ಮತ್ತು ದೇವರು, ದೇವಾಲಯಗಳೇ ಮುಖ್ಯವಾಗಿದ್ದವು. ಇಂತಹ ವಾತಾವರಣದಲ್ಲಿ ಬ್ರಿಟಿಷರ ಆಗಮನದಿಂದ, ಶಿಲ್ಪಕಲೆಯಲ್ಲೂ ಬದಲಾವಣೆಯಾಯಿತು. ಆಧುನಿಕ ಭಾರತದ ಶಿಲ್ಪಿಗಳು ಹೊಸ ಚಿಂತನೆಯ ಗಮನ ಹರಿಸಿ, ತಮ್ಮಲ್ಲಿರುವ ಅಭಿವ್ಯಕ್ತತನವನ್ನು ವ್ಯಕ್ತಪಡಿಸಿದರು. ಶಾಂತಿ ನಿಕೇತನದ ಶಿಲ್ಪಿ ರಾಮ ಕಿಂಕರ ಬೈಜ್ ಸ್ವಾತಂತ್ರ್ಯ ಪೂರ್ವದಲ್ಲೇ ಅಲ್ಲಿ ಪರಿಸರದ ಶಿಲ್ಪಗಳನ್ನು ರಚಿಸಿ, ತಮ್ಮ ಜನರ ಜೀವನವನ್ನು ಪ್ರತಿಬಿಂಬಿಸಿ, ಸಾಮಾಜಿಕ ಶಿಲ್ಪ ರಚಿಸಿರುವುದರಲ್ಲಿ ಮೊದಲಿಗರು. ಸ್ವಾತಂತ್ರ್ಯ ನಂತರ ನಮ್ಮ ಶಿಲ್ಪಕಲೆಯಲ್ಲಿ ವಿವಿಧ ಮಾಧ್ಯಮಗಳಿಂದ ಶಿಲ್ಪಗಳು ರಚನೆಯಾದವು. ದೇವಿ ಪ್ರಸಾದ್ ರಾಯ್‌ಚೌದರಿ, ಧವಿರ್‌ವಾಲ ಆಧುನಿಕ ಶಿಲ್ಪಕಲೆಯ ಬೆಳವಣಿಗೆಯಲ್ಲಿ ಪ್ರಮುಖರು. ಇವರು ರಚಿಸಿದ ಶಿಲ್ಪಗಳ ಮೇಲೆ ಪಾಶ್ಚಾತ್ಯ ಶಿಲ್ಪಕಲೆಯ ಪ್ರಭಾವವಿದ್ದರೂ, ಭಾರತೀಯತೆಯಿಂದ ಕೂಡಿವೆ.

ಭಾರತದ ಸಮಕಾಲೀನ ಶಿಲ್ಪ ಕಲಾವಿದರು, ಕುಲುಮೆ, ಬೆಸುಗೆ, ಎರಕ, ಮಾದರಿ ರಚನೆ, ಕಲ್ಲು ಮತ್ತು ಮರ ಕೆತ್ತನೆಯ ಸಾಧನಗಳೊಂದಿಗೆ, ಪರಮಾಣು ನಿಯಂತ್ರಣ ಮತ್ತು ಪ್ರೇರಣೆ, ಬೆಸೆಯುವಿಕೆ ಹಾಗೂ ತಾಂತ್ರಿಕ ವಿಧಾನಗಳನ್ನು ಬಳಸುತ್ತಿದ್ದಾರೆ. ಅಲ್ಲದೆ ಹೊಸ ಸಾಮಗ್ರಿಗಳು ಮತ್ತು ತಂತ್ರಗಳು, ಹೊಸ ಅನುಭವಗಳು ಹಾಗೂ ಇಂದ್ರಿಯ ಸೂಕ್ಷ್ಮವು ಜಾಗೃತಗೊಂಡಿದ್ದು ಕಲಾತ್ಮಕ ಅಭಿವ್ಯಕತಿ ಮುನ್ನಡೆದಿದೆ. ತಾಂತ್ರಿಕತೆ, ಕಲಾತ್ಮಕ ಕೌಶಲ ಮತ್ತು ಪ್ರತಿಭೆಯ ಶ್ರೀಮಂತಿಕೆ ಇಂದು ಸಮಕಾಲೀನ ಕಲಾವಿದರ ಎಲ್ಲಾ ಚಟುವಟಿಕೆಗಳನ್ನು ಬೆಳೆಸುತ್ತದೆ ಹಾಗೂ ಅದರ ಕಾರ್ಯ ಸಾಮಗ್ರಿಯ ಅನ್ವಯ ಪೂರ್ಣ ಭೌತಿಕ ಪ್ರಪಂಚವನ್ನು ಬಳಸಿದೆ. ವಿಭಿನ್ನ ಕಲೆಗಳ ಸಂಬಂಧ ಮತ್ತು ತಂತ್ರಗಳೆರಡು ಈಗ ಪರಸ್ಪರ ನಿಕಟವಾಗುತ್ತಿವೆ. ಆದುದರಿಂದ ನಮ್ಮ ಹಲವು ಹಿರಿಯ ಹಾಗೂ ಯುವ ಶಿಲ್ಪಕಲಾವಿದರು ಇತ್ತೀಚಿನ ಪ್ರಯೋಗಗಳಲ್ಲಿ ಅಭಿವ್ಯಕ್ತಿಯ ವಿಶಾಲತೆಯನ್ನು ಕಾಣಬಹುದು. ಸಂಯೋಜನೆಯ ಜೀವಂತ ಗುಣ, ಒಬ್ಬ ಕಲಾವಿದನ ಇತರ ಕೆಲಸಗಳ ವಿಶಿಷ್ಟ ಮಾಧ್ಯಮದಿಂದಾಗಿ ತನ್ನ ಕೆಲಸ, ಹಲವು ಅನುಭವಗಳು ಮತ್ತು ಇಂದ್ರಿಯ ಸೂಕ್ಷ್ಮಗಳ ವ್ಯಾಪಕತೆಯನ್ನು ಪ್ರತಿಬಿಂಬಿಸುತ್ತದೆ.

ಭಾರತದ ಕೆಲವು ಶಿಲ್ಪ ಕಲಾವಿದರು ಮಾತ್ರ ಈ ಬದಲಾದ ಸ್ಥಿತಿಗಳಲ್ಲಿ ಸ್ಥಿರವಾದ ಅಭಿಪ್ರಾಯಗಳನ್ನು ಹೊತ್ತು ಕೆಲಸಗಳನ್ನು ಮಾಡಿದ್ದಾರೆ. ೧೯೪೦ರಿಂದ ಭಾರತದ ಸಮಕಾಲೀನ ಶಿಲ್ಪದಲ್ಲಿ ಆದ ಬದಲಾವಣೆಯು ತುಂಬಾ ಗಮನಾರ್ಹವಾದುದು. ಆದರೆ ೧೯೬೦ರ ನಂತರ ಇದರ ಫಲಿತಾಂಶ ಕಾಣಲಿಲ್ಲ. ಹೊಸ ಬದಲಾವಣೆ, ರೂಪ, ಕಾರ್ಯವಿಧಾನ ಅಥವಾ ಪರಿಕಲ್ಪನೆಯು ವಿಶಾಲವಾಗಿ ವ್ಯಕ್ತಿಗತವಾಗಿದ್ದು, ಶಿಲ್ಪಕಾರರ ರಚನಾತ್ಮಕ ವ್ಯಕ್ತಿತ್ವದ ಮೇಲೆ ಅವಲಂಬಿಸಿದೆ. ಭಾರತೀಯ ಸಮಕಾಲೀನ ಶಿಲ್ಪದಲ್ಲಿ ಸಾಂಪ್ರದಾಯಿಕ ಅಥವಾ ಸಮಕಾಲೀನ ಪಶ್ಚಿಮದ ಶೈಲಿಯ 'ಶಾಲೆ' ಅಥವಾ ''ಇಸಂ''ನಲ್ಲಿ ಸಂಘಟಿತ ಚಳುವಳಿಯು ಇರುವುದಿಲ್ಲ.

ಆದುದರಿಂದ ಭಾರತೀಯ ಸಮಕಾಲೀನ ಶಿಲ್ಪದ ಶೈಲಿಗಳು ನಮ್ಮ ಶಿಲ್ಪಕಾರರ ವೈಯಕ್ತಿಕ ಅಭಿವ್ಯಕ್ತಿಯ ಮೇಲೆ ಹಾಗೂ ಅವರ ವೈಯಕ್ತಿಕ ಭಾವನೆಗಳು ಮತ್ತು ಪರಿಸರದ ವೈಯಕ್ತಿಕ ಜಾಗೃತಿಯು ಸುಧಾರಣೆಗೊಂಡಿದೆ. ಹೊಸ ತಾಂತ್ರಿಕತೆಯು, ಕ್ರಾಂತಿ ಮುನ್ನಡೆಯೊಂದಿಗೆ ನಮ್ಮ ಸಾಂಪ್ರದಾಯಿಕ ಜೀವನದ ಒಟ್ಟು ಮನೋಭಾವಗಳು ಹೊಡೆದು ಹೋಗುತ್ತದೆ. ಹಾಗೂ ವ್ಯಕ್ತಿಗತವು ನೆಲೆಯೂರುತ್ತದೆ. ನಮ್ಮ ಶಿಲ್ಪಿಗಳು ಮತ್ತಿತರ ರಚನಾತ್ಮಕ ವ್ಯಕ್ತಿಗಳು ನಮ್ಮ ಸಮಗ್ರ ನಾಗರೀಕತೆಯಲ್ಲಿ ರಚನಾತ್ಮಕ ಬದಲಾವಣೆಯನ್ನು ವಿಶಿಷ್ಟವಾಗಿ ನೋಡಿರುತ್ತಾರೆ. ಪ್ರಾರಂಭದ ಈ ಬದಲಾವಣೆಯು ಹೆಚ್ಚು ಅವ್ಯವಸ್ಥೆ, ಭಾವನಾತ್ಮಕ ಹಾಗೂ ಗೊಂದಲಮಯವಾಗಿತ್ತು.

ಸಮಕಾಲೀನ ಭಾವನೆಯೊಂದಿಗೆ ವ್ಯಕ್ತಿಗತ ಶೈಲಿಯ ವಿಕಸನಕ್ಕಾಗಿ ಹಾಗೂ ಸಾಂಪ್ರದಾಯಿಕ ಪದ್ಧತಿಗಳು ಮತ್ತು ಬಂದಾಗ ಸರ್ಕಾರಿ ಕಲಾ ಶಾಲೆಗಳ ಶೈಕ್ಷಣಿಕ ಅಸ್ತಿತ್ವದೊಂದಿಗೆ ಪ್ರತ್ಯೇಕತೆಯನ್ನು ತಂದವರಲ್ಲಿ ರಾಮಕಿಂಕರ್ ಬೈಜ್ ಅವರು ಮೊದಲಿಗರು. ಆದುದರಿಂದ ಅವರು ಮಾರ್ಗದರ್ಶಕ ರೆಂದು ಪರಿಗಣಿತರಾಗಿದ್ದಾರೆ. ನಮ್ಮ ದೇಶದ ಶ್ರೇಷ್ಠ ಸಂಪ್ರದಾಯಗಳಂತೆ ಪಾಶ್ಚಾತ್ಯ ದೇಶಗಳಲ್ಲಿ ಸಮಕಾಲೀನ ಶಿಲ್ಪಕಾರರ ಕೆಲಸವು ಶ್ರೇಷ್ಠವೆಂದು ಅವರು ಬೆಳವಣಿಗೆಯ ಸಂದರ್ಭದಲ್ಲಿ ಅರಿತಿದ್ದರು. ವರ್ಗಗಳ ಸಾರಸಂಗ್ರಹವಾಗಿಯೂ, ಭಾವನಾತ್ಮಕ ಚೈತನ್ಯ ಮತ್ತು ರಚನಾತ್ಮಕ ಚೈತನ್ಯ ತನ್ನ ಕೆಲಸಗಳನ್ನು ಹೆಚ್ಚು ಮೂಲವಾಗಿ ಹಾಗೂ ಜೀವಂತವಾಗಿ ಮಾಡಿದೆ. ಹೆಚ್ಚು ವೈಯಕ್ತಿಕ ಪ್ರಭಾವದೊಂದಿಗೆ ಅವರು ವ್ಯಾಪಿಸಿದ್ದು, ಅವುಗಳಲ್ಲಿ ಒಂದುಭಾವನಾತ್ಮಕ ಕೌಶಲ ಮತ್ತು ಪರಿಸರದ ಕೃತಿಯ ಸಾಧನಗಳು ಮತ್ತು ಸಾಮಗ್ರಿಯ ನಡುವೆ ಆತ್ಮದ ಕಲ್ಪನೆ ಮತ್ತು ಉದ್ದೇಶಿತ ನಮೂನೆ ನಡುವಣ ನಡೆದಿದೆ. ಮನಃಪೂರ್ವಕವಾಗಿ ಮತ್ತು ಭಾವನಾತ್ಮಕವಾಗಿ ರಾಮಕಿಂಕರ್ ತಮ್ಮ ಪರಿಸರಕ್ಕೆ ಸ್ಪಂದಿಸುತ್ತಾರೆ.

*(ಮುಂದುವರಿಯುವುದು)*

**TRIMURTI**
**JEWELLERS**
**GOLD AND DIAMOND ORNAMENTS**
460/4, Venkatesh Niwas,
Ground Floor, Bhaudaji Road,
Opp Mysore Association,
Matunga (C.Rly.) Mumbai-400 019.
Phone : ***2402 3485***

## ವ್ಯಾಖ್ಯಾನ ಭಾಸ್ಕರ - ಮತ್ತೂರು ಕೃಷ್ಣಮೂರ್ತಿ

(ಪುಟ 6ರಿಂದ)

ಅಪೂರ್ವ ವಾಗ್ಮಿ : ನಮ್ಮ ನಾಡಿನ ಹೆಸರಾಂತ ವಾಗ್ಮಿಗಳಲ್ಲಿ ಮತ್ತೂರು ಅವರದು ದೊಡ್ಡ ಹೆಸರು. ಅವರೊಬ್ಬ ಬಹುಭಾಷಾ ವಿದ್ವಾಂಸ, ತುಂಬಿದ ಕೊಡ. ''ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು'' ಎಂಬಂತೆ ಅವರ ವಾಕ್ ಚಾತುರ್ಯವಿದೆ. ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ, ವಿನೋಬಾ ಭಾವೆ, ನೆಹರೂ ಮೊದಲಾದವರ ಆಶು ಭಾಷಣಗಳನ್ನು ಆಗಿಂದಾಗಲೇ ಕನ್ನಡಕ್ಕೆ ಅನುವಾದಿಸಿ ಅಪಾರ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದುದು ಸಾಮಾನ್ಯ ಸಂಗತಿಯಲ್ಲ.

ಕವಿ ಕುಮಾರವ್ಯಾಸನ ಗದುಗಿನ ಭಾರತವನ್ನು ಮನೆಮನೆಗೆ ದೂರದರ್ಶನದ ಮೂಲಕ ಉಣಬಡಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಗಮಕಿ ಹೊಸಹಳ್ಳಿ ಕೇಶವ ಮೂರ್ತಿ ಅವರೊಂದಿಗೆ ಸೇರಿಕೊಂಡು ಕುಮಾರ ವ್ಯಾಸ ಭಾರತದ ಹತ್ತು ಪರ್ವ ಹಾಗೂ ಮಹಾಭಾರತದ ಶಾಂತಿಪರ್ವ ಅನುಶಾಸನ ಪರ್ವಗಳನ್ನು 200 ಕ್ಯಾಸೆಟ್‌ಗಳಲ್ಲಿ ಹೊರತಂದ ಹಠ ಸಾಹಸಿ ಮತ್ತೂರು ಕೃಷ್ಣ ಮೂರ್ತಿ.

ಮತ್ತೂರು ಕೃಷ್ಣ ಮೂರ್ತಿ ಅವರು ಕನ್ನಡದ ಹಿರಿಯ ಸಾಹಿತಿಗಳಾದ ಡಿವಿಜಿ, ಮಾಸ್ತಿ, ಕಾರಂತ, ವಿ.ಸೀ., ಸಿದ್ಧವನಹಳ್ಳಿ, ಕೃಷ್ಣಶರ್ಮ ಮೊದಲಾದವರೊಡನೆ ನಿಕಟಸಂಪರ್ಕವನ್ನಿಟ್ಟು ಕೊಂಡವರು. ಅವರದು ಸುಸಂಸ್ಕೃತ ವ್ಯಕ್ತಿತ್ವ. ಒಳ್ಳೆಯ ಭಾವ ಜೀವಿ, ಸಹೃದಯ ಸಂಪನ್ನರು. ಸರಳತೆ ಅವರ ಬಹುದೊಡ್ಡ ಆಸ್ತಿ. ಒಳ್ಳೆಯ ಕನ್ನಡಿಗ ಒಳ್ಳೆಯ ಭಾರತೀಯ ಹೇಗಿರಬೇಕೆಂಬುದಕ್ಕೆ ಅವರು ನಮಗೆ ಮಾದರಿ. ಮತ್ತೂರು ಅವರ ಜೀವನ ಚರಿತ್ರೆಯನ್ನು ಆಧರಿಸಿ ಬರೆದ ''ಮತ್ತೂರ್‌ಜಿ ಜೀವನ ಗಾಥೆ'' ಕೃತಿ ಅವರ ಅದ್ಭುತ ವ್ಯಕ್ತಿತ್ವವನ್ನು ಅನಾವರಣಗೊಳಿಸಿದೆ.

ಮತ್ತೂರು ಅವರ ಬಹುಮುಖಿ ಪ್ರತಿಭೆಗೆ ಸಂದ ಮಾನ ಸಮ್ಮಾನಗಳು ಹತ್ತು ಹಲವು. ಗಾಂಧಿ ಶತಾಬ್ದಿ ಚಿನ್ನದ ಪದಕ, ಕರ್ನಾಟಕ ರಾಜ್ಯ ಪ್ರಶಸ್ತಿ, ಭಾರತ ಸೇವಾ ಪ್ರಶಸ್ತಿ, ಕಂಚಿ ಕಾಮಕೋಟಿ ಮಠದ ವ್ಯಾಖ್ಯಾನ ಕೋಕಿಲ ಪ್ರಶಸ್ತಿ, ಗೊರೂರು ಪ್ರತಿಷ್ಠಾನದ ಪ್ರಶಸ್ತಿ, ವ್ಯಾಖ್ಯಾನ ಭಾಸ್ಕರ ಪ್ರಶಸ್ತಿ, ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಈ ಹೆಮ್ಮೆಯ ಕರ್ನಾಟಕ ಸುಪುತ್ರನಿಗೆ ಈಗ 76ರ ಹರೆಯ ಇಪ್ಪತ್ತರ ಯುವಕರೂ ನಾಚುವಂತೆ ಮತ್ತೂರು ಅವರು ಈ ಇಳಿ ವಯಸ್ಸಿನಲ್ಲೂ ಕ್ರಿಯಾಶೀಲರಾಗಿ ಓಡಾಡುತ್ತಿದ್ದಾರೆ. ಅವರದು ಸಂತೃಪ್ತ ಬದುಕು. ಒಬ್ಬ ವ್ಯಕ್ತಿಯಾಗಿ, ಶಕ್ತಿಯಾಗಿ ಅವು ಸಮಾಜದ ಉನ್ನತಿಗೆ ಅರ್ಹನಿಸಿ ಸೇವೆ ಸಲ್ಲಿಸುತ್ತಿದ್ದಾರೆ. ಅವರೊಬ್ಬ ಅಪರೂಪದ ಮಹಾನ್ ಸಾಂಸ್ಕೃತಿಕ ಚೇತನ.

- ಡಾ. ಜಿ.ಎನ್. ಉಪಾಧ್ಯ.

## ಸಂಶೋಧನಾ ಮಹಾಪ್ರಬಂಧ 'ಕಾರಂತ ಮತ್ತು ಪ್ರೇಮಚಂದ' ಬಿಡುಗಡೆ

ಅಭಿಜ್ಞಾ ಪ್ರಕಾಶನದ ಆಯೋಜನೆಯಲ್ಲಿ ಡಾ. ಕರುಣಾಕರ್ ಎನ್. ಶೆಟ್ಟಿಯವರ ಸಂಶೋಧನಾ ಮಹಾಪ್ರಬಂಧ 'ಕಾರಂತ ಮತ್ತು ಪ್ರೇಮಚಂದ' ಕೃತಿಯ ಬಿಡುಗಡೆಯ ಸಮಾರಂಭ ಕರ್ನಾಟಕ ಸಂಘದ ಕಿರು



ಸಭಾಗೃಹದಲ್ಲಿ ನೆರವೇರಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಿ. ಡಿ. ಜೋಶಿಯವರು ವಹಿಸಿದ್ದರು. ಡಾ. ಶ್ರೀಮತಿ ಸುನೀತಾ ಎಂ. ಶೆಟ್ಟಿಯವರು ಕೃತಿ ಬಿಡುಗಡೆ ಮಾಡಿದರು. ಡಾ. ಕರುಣಾಕರ್ ಎನ್. ಶೆಟ್ಟಿಯವರ ಮಹಾಪ್ರಬಂಧದ ಮಾರ್ಗದರ್ಶಕರಾದ ಡಾ. ವಿಶ್ವನಾಥ ಕಾರ್ನಾಡರು ಗೌರವ ಅತಿಥಿಗಳಾಗಿ ಆಗಮಿಸಿದ್ದರು. ಡಾ ಜಿ. ಎನ್ ಉಪಾಧ್ಯರು ಕೃತಿ ಪರಿಚಯ ಮಾಡಿದರು.

ಕು। ಶ್ರುತಿ ಕರುಣಾಕರ್ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮವನ್ನು ಅಭಿಜ್ಞಾ ಪ್ರಕಾಶನದ ನಿರ್ದೇಶಕ ಸೀತಾರಾಮ ಶೆಟ್ಟಿಯವರು ನಿರೂಪಿಸಿ ವಂದಿಸಿದರು.

## ಮಹಾಭಾರತ ಎಂದರೆ ಮಾನವೇತಿಹಾಸ
### ಡಾ. ಸುನೀತಾ ಎಂ. ಶೆಟ್ಟಿ

''ಮಹಾಭಾರತ ಎಂದರೆ ಮಾನವೇತಿಹಾಸ. ಇದನ್ನು ಇತಿಹಾಸ ದೃಷ್ಟಿಯಿಂದಲೇ ಅವಲೋಕಿಸಬೇಕು. ಮಾನವ ಇತಿಹಾಸದ ಸಣ್ಣಸಣ್ಣ ತುಣುಕುಗಳನ್ನು ಕುಮಾರವ್ಯಾಸ ತನ್ನ 'ಗದುಗಿನ ಭಾರತದಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ್ದಾನೆ''... ಎಂದು ಖ್ಯಾತ ಲೇಖಿಕಿ, ಕವಿ, ಸಾಹಿತಿ, ಡಾ. ಸುನೀತಾ ಎಂ. ಶೆಟ್ಟಿಯವರು ನುಡಿದರು.

ಇತ್ತೀಚೆಗೆ ಅವರು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಆಯೋಜಿಸಿದ್ದ ''ಕುಮಾರ ವ್ಯಾಸನ ಕಾವ್ಯ''ದ ಕುರಿತು ಒಂದು ವಿಶೇಷ ಉಪನ್ಯಾಸದಲ್ಲಿ ಮಾತನಾಡುತ್ತಾ, ''ಕಾವ್ಯ ಭಾಮಿನಿಯನ್ನು ಬಳುಕಿಸಿದವನು'' ಎಂದು ಕವಿಗಳಿಂದ ಪ್ರಶಂಸಿಸಲ್ಪಟ್ಟ ತನ್ನ ಕಾವ್ಯದಲ್ಲಿ ಯುಗಧರ್ಮ, ಯುಗದ ಪಿಂಗಡನೆಯನ್ನು ಮಾಡುವುದರ ಮೂಲಕ ಆ ಯುಗಕ್ಕೆ ನಮ್ಮನ್ನು ಕೊಂಡೊಯ್ಯುತ್ತಾನೆ. ವರ್ಣಪದ್ಧತಿ, ನಿಯೋಗಪದ್ಧತಿ, ಆಂತರಿಕ ಯುದ್ಧ ಗೋಸಂಪತ್ತು ಮುಂತಾದ ಅನೇಕ ವಿಷಯಗಳು ಮಹಾಭಾರತದ ಕಥೆಯಲ್ಲಿ ಅಡಕಗೊಂಡಿವೆ. ಕುಮಾರವ್ಯಾಸನ ಕಾವ್ಯ ನೆಲಮುಗಿಲಿನ ಸಂಬಂಧವನ್ನು ಇರಿಸಿಕೊಂಡಿದೆ'' ಎಂದವರು ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ ಅವರು,

## ಸುತ್ತ ಮುತ್ತ

ಕಾವ್ಯವಾಚನವನ್ನು ಮಾಡಿದ ಡಾ. ಸುನೀತಾ ಎಂ. ಶೆಟ್ಟಿಯವರನ್ನು ಅಭಿನಂದಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಲಲಿತಾಗುಗ್ಗಳ ಶೆಟ್ಟಿ ನಿರ್ವಹಿಸಿದರು. ಸ್ವಾಗತಗೀತೆಯನ್ನು ಉತ್ತಮ್ ನಾಯಕ್ ಹಾಡಿದರು. ಅತಿಥಿಗಳ ಪರಿಚಯವನ್ನು ಶ್ರೀಮತಿ ಸುಮನ್ ಚಿಪ್ಳೂಣಕರ್ ಮಾಡಿಕೊಟ್ಟರು. ಶ್ರೀಮತಿ ಜಯಲಕ್ಷ್ಮೀ ಪರ್ವತೀಕರ್ ವಂದನಾರ್ಪಣೆಗೈದರು. ಕಾರ್ಯಕ್ರಮದಲ್ಲಿ ಎಸ್.ಎಸ್. ಕೆಲವಾಡಿ, ಅರುಣ್ ಕುಮಾರ್, ರವಿಕುಮಾರ್, ಶ್ರೀಮತಿ ಪ್ರಭಾನಾಯಕ, ಮರಿಯಪ್ಪ ನಾಟೇಕರ್, ಮಹೇಶ ಹೆಗ್ಡೆ, ಮಲ್ಲಿಕಾ ಎನ್., ಶ್ರೀಮತಿ ನಳಿನಿ ಮೊದಲಾದವರು ಭಾಗವಹಿಸಿದ್ದರು.

## ಕನ್ನಡ ಸತ್ವವನ್ನು ಬೆಳೆಸಿದ ಬೇಂದ್ರೆ

ಬೇಂದ್ರೆಯವರ 'ಗರಿ' ಕವನ ಸಂಕಲನದ ಪ್ರತಿಯೊಂದು ಕವನಗಳು ಅದ್ಭುತವಾಗಿವೆ. ಪಂಪ, ಕುಮಾರ ವ್ಯಾಸರಂತೆ ಬೇಂದ್ರೆಯವರು ಕನ್ನಡದ ಸತ್ವವನ್ನು ಬೆಳೆಸಿದವರು. ಅವರು ತಮ್ಮ ಜೀವನದಲ್ಲಿ ಮೈತ್ರಿಯನ್ನು ಹೊಂದಿದ್ದರು. ಅನೇಕ ಸಾನೆಟ್‌ಗಳನ್ನು ಬರೆದಿರುವ ಬೇಂದ್ರೆಯವರು. ಒಂದು ಶಬ್ದವನ್ನು ನಾಲ್ಕಾರು ರೀತಿಯ ಬಳಸುವುದನ್ನು ಕಲಿತಿದ್ದರು. ಎಂದು ಕವಿ, ಲೇಖಕ, ಡಾ. ಜೀವಿ ಕುಲಕರ್ಣಿಯವರು ನುಡಿದರು. ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಬೇಂದ್ರೆಯವರ ಕಾವ್ಯದ ಕುರಿತು ಮಾತನಾಡುತ್ತಾ, 'ಪಾತರಗಿತ್ತಿ ಪಕ್ಕ, ಕುಣಿಯೋಣ ಬಾರಾ, ಮೊದಲಾದ ಸುಂದರ ಕವನಗಳನ್ನು ಬರೆದಿರುವ ಬೇಂದ್ರೆಯವ ರ 'ಬೆಳಗು' ಕವನವು ಬೆಳಕಿನ ಕಾವ್ಯವಾಗಿದೆ. ಮತ್ತು ಎಲ್ಲಾ ವಿಮರ್ಶಕರಿಂದ ಹೊಗಳಲ್ಪಟ್ಟ 'ಸಖೀಗೀತ' ಕನ್ನಡದ ಅಧ್ಭುತ ಕಾವ್ಯ. ಬೇಂದ್ರೆಯವರು ತಮ್ಮ ದುಃಖವನ್ನು ಮರೆತು ಹಾಸ್ಯಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದರು'' ಎಂದು ಅವರು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಭಾಗದ ಮುಖ್ಯಸ್ಥ ಡಾ.ಜಿ.ಎನ್. ಉಪಾಧ್ಯ ಅವರು ವಹಿಸಿದ್ದರು. ಮುಖ್ಯ ಅತಿಥಿಗಳ ಪರಿಚಯವನ್ನು ಎಸ್. ಎಸ್. ಕೆಲವಾಡಿಯವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಮರಿಯಪ್ಪ ನಾಟೇಕರ್ ನಿರ್ವಹಿಸಿದರು. ಅರುಣ್ ಕುಮಾರ್ ಅವರು ಸ್ವಾಗತ ಗೀತೆಯನ್ನು ಹಾಡಿದರು. ಕಾರ್ಯಕ್ರಮದಲ್ಲಿ ನಾರಾಯಣ ಮೂರ್ತಿ, ಶ್ರೀಮತಿ ಸುಖ್ದಾನಿ ಬಿರಾದಾರ್, ಶ್ರೀಮತಿ ಪ್ರಭಾನಾಯಕ್, ಶ್ರೀಮತಿ ನಳಿನಿ ಶ್ರೀಮತಿ ಜಯಲಕ್ಷ್ಮಿ ಪಾರ್ವತೀಕರ್, ಮಲ್ಲಿಕಾ, ರವಿಕುಮಾರ್, ಮಹೇಶ್, ಉತ್ತಮ್ ಮೊದಲಾದವರು ಭಾಗವಹಿಸಿದ್ದರು.

## ಮುಂಬಯಿ ಲೇಖಕರ ಕೃತಿ ವಿಮರ್ಶೆ ಕಾರ್ಯಕ್ರಮ

ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕ ಮತ್ತು ಯಂಗ್‌ಮೆನ್ಸ್ ಎಜ್ಯುಕೇಶನ್ ಸೊಸಾಯಿಟಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಮುಂಬಯಿ ಲೇಖಕರ ಕೃತಿ ವಿಮರ್ಶೆ ಕಾರ್ಯಕ್ರಮವು ಶುಕ್ರವಾರ, 9-1-2004ರಂದು ಸಂಜೆ 7 ಗಂಟೆಗೆ ನ್ಯೂ ಭಾರ್ದಾ ಹೈಸ್ಕೂಲಿನ

ಸಭಾಗೃಹದಲ್ಲಿ ನಡೆಯಿತು. ಆನಂದ ಶೆಟ್ಟಿ ಮತ್ತು ವಿಠ್ಠಲ ಶೆಟ್ಟಿ ಅವರೂ ವೇದಿಕೆಯಲ್ಲಿದ್ದರು.

ಶಾಲಾ ವಿದ್ಯಾರ್ಥಿಗಳಿಂದ ಪ್ರಾರ್ಥನೆಯಾದ ನಂತರ ಅಂದಿನ ಸಭಾಧ್ಯಕ್ಷರಾದ ಎನ್.ಪಿ. ಸುವರ್ಣ ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಜೋಶಿ ಅವರು ಸ್ವಾಗತ ಮತ್ತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ, ಮಹಾರಾಷ್ಟ್ರದ ಕನ್ನಡಿಗರು ಅದಕ್ಕೆ ತ್ರಿಕರಣಪೂರ್ವಕ ಬೆಂಬಲ ನೀಡಬೇಕೆಂದರು. ಘಟಕದ ಚಟುವಟಿಕೆಗಳಲ್ಲಿ 'ಮನೆಮನೆಯಲ್ಲಿ ಸಾಹಿತ್ಯ ಸ್ಪಂದನ', ಕೃತಿ ವಿಮರ್ಶೆ, ದತ್ತಿ ಉಪನ್ಯಾಸಗಳು, ಕಾವ್ಯ ವಾಚನ ಗಾಯನ, ಸಾಹಿತ್ಯ ಗೋಷ್ಠಿಗಳನ್ನು ಉಲ್ಲೇಖಿಸಿದರು.

ಸಾ. ದಯಾ ಅವರು ಡಾ. ಕರುಣಾಕರ ಶೆಟ್ಟಿ ಅವರ 'ಪೂರ್ಣಿಮಾ' ಕಥಾ ಸಮೀಕ್ಷಿಸಿದರು. ಡಾ. ಗಿರಿಜಾ ಶಾಸ್ತ್ರಿ ಅವರು ಜಿ.ಪಿ. ಕುಸುಮಾ ಅವರ 'ಭಾವಬಿಂಬ' ಲೇಖನಗಳನ್ನು ಸಮೀಕ್ಷಿಸುತ್ತಾ 'ಗದ್ಯ ಲೇಖನದಲ್ಲಿ ಕಾವ್ಯ ಶಕ್ತಿ' ಕಂಡು ಬರುತ್ತದೆ ಎಂದು ಸೋದಾರಣವಾಗಿ ನಿರೂಪಿಸಿ, ಅಭಿನಂದಿಸಿದರು. ಜಿ.ಟಿ ಆಚಾರ್ಯ ಅವರು ಕೊಲ್ಯಾರು ರಾಜು ಶೆಟ್ಟಿ ಅವರ 'ಜೈಮಿನಿ ಭಾರತ ಕಥಾ ಸೌರಭ'ವನ್ನು ವಿಮರ್ಶಿಸಿದರು. ಹೊಸಗನ್ನಡದ ಗದ್ಯದಲ್ಲಿ ಸರಳ ಶೈಲಿಯಲ್ಲಿ ನಿರೂಪಿತವಾದ, ಜೈಮಿನಿ ಭಾರತದ ಕಥೆಗಳನ್ನು ವಿದ್ಯಾರ್ಥಿಗಳು, ಸಾಮಾನ್ಯ ಓದುಗರು ಸುಲಭವಾಗಿ ಓದಿ ನಲಿಯಬಹುದೆಂದು ಹೇಳಿದರು. ಡಾ. ಡಿ.ಡಿ. ಜೋಶಿ ಅವರು 'ದ್ವಿತೀಯ ಅಭಿಪ್ರಾಯ' ಎಂಬ ಹದಿನಾರು ಹರಟೆಗಳ ಸಂಕಲನವನ್ನು ಡಾ. ಕರುಣಾಕರ ಶೆಟ್ಟಿ ಅವರ ಸಮಗ್ರವಾಗಿ ಪರಿಚಯಿಸಿದರು. ಸುವರ್ಣ ಅವರು ಸಭೆಗೆ ಬಂದ ಕೃತಿಕಾರರಿಗೆ ಹಾಗೂ ಕೃತಿಗಳನ್ನು ವಿಮರ್ಶಿಸಿದವರಿಗೆ ಪುಷ್ಪಗೌರವ ಮಾಡಿದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡದಲ್ಲಿ ಹಲವಾರು ಹಿರಿ-ಕಿರಿಯ ಲೇಖಕರು ಮುಂಬಯಿಯಲ್ಲಿ ಕಥೆ, ಕಾದಂಬರಿ, ನಾಟಕ, ಕವಿತೆ, ಪ್ರಬಂಧ, ಹೊಸ ಕಥನ ಇತ್ಯಾದಿಗಳನ್ನು ರಚಿಸಿದ್ದಾರೆ. ಹಾಗೂ ರಚಿಸುತ್ತಿದ್ದಾರೆ. ಮುಂಬಯಿ ಕನ್ನಡಿಗರು ಮತ್ತು ಕನ್ನಡ ಸಂಸ್ಥೆಗಳು ಈ ಗ್ರಂಥಗಳನ್ನು ಕೊಂಡು ಓದುವ ಮೂಲಕ ಪ್ರೋತ್ಸಾಹ ನೀಡಬೇಕು. ಕನ್ನಡ ಗ್ರಂಥಾಲಯಗಳು ತಾವಾಗಿಯೇ ಮುಂದೆ ಬಂದು ಗ್ರಂಥ ಖರೀದಿಸಿ, ಲೇಖಕರನ್ನು ಮತ್ತು ಪ್ರಕಾಶಕರನ್ನು ಪ್ರೋತ್ಸಾಹಿಸಬೇಕೆಂದರು. ಇಂಥ ಕಾರ್ಯಕ್ರಮಗಳು ಬಹಳ ಉಪಯುಕ್ತವಾಗಿವೆ. ಆದ್ದರಿಂದಲೇ ಪ್ರತಿ ವರ್ಷ ನಾವು ಇಂಥ ಕಾರ್ಯ ನಡೆಸಿ ಸಾಹಿತಿಗಳನ್ನು ಪರಿಚಯಿಸುತ್ತೇವೆ ಎಂದರು. ಚಂದ್ರಶೇಖರ್ ರಾವ್ ವಂದಿಸಿದರು. ಪ್ರೊ. ಸೀತಾರಾಮ ಶೆಟ್ಟಿ ಕಾರ್ಯಕ್ರಮವನ್ನು ನಿರ್ದೇಶಿಸಿ ಪಾಲ್ಗೊಂಡವರ ಪರಿಚಯವನ್ನು ಮಾಡಿಕೊಟ್ಟರು.

### ಕೃತಿ ವಿಮರ್ಶೆ

ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ ಹಾಗೂ ಆರ್. ಜೆ. ಕಾಲೇಜು ಕನ್ನಡ ಸಂಘಗಳ ಜಂಟಿ ಆಶ್ರಯದಲ್ಲಿ ರವಿವಾರ ದಿ. ೧೪.೧೨.೨೦೦೩ರಂದು ಆರ್.ಜೆ. ಕಾಲೇಜಿನಲ್ಲಿ ಮುಂಬಯಿ ಲೇಖಕರ ಕೃತಿ ವಿಮರ್ಶೆ ಕಾರ್ಯಕ್ರಮ ಜರಗಿತು. ಕ.ಸಾ.ಪ. ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಡಾ. ಜಿ.ಡಿ. ಜೋಶಿಯವರು ಅಧ್ಯಕ್ಷ ಸ್ಥಾನದಿಂದ ಸರ್ವರನ್ನೂ ಸ್ವಾಗತಿಸಿ ಕೃತಿ ವಿಮರ್ಶೆಗಳ ವೈಚಿತ್ರ್ಯ ವಿವರಿಸುತ್ತ ''ಮುಂಬಯಿ ಕನ್ನಡ ಲೇಖಕರ ಪರಿಚಯ, ಅವರ ಕೃತಿಗಳ ಪರಿಚಯ ತನ್ಮೂಲಕ ಕನ್ನಡಿಗರ ಹೃದಯಗಳ ಬೆಸುಗೆಗೆ ಕನ್ನಡ ಸಾಹಿತ್ಯ ಭಾಷೆಗಳ ಬೆಳವಣಿಗೆಗೆ ಹೆಚ್ಚು ಒತ್ತು ಕೊಟ್ಟು ಕನ್ನಡವನ್ನು ಉಳಿಸಿ ಬೆಳೆಸುವ ಪ್ರಯತ್ನ ನಮ್ಮದು'' ಎಂದರು. ಪ್ರಸಿದ್ಧ ಕವಿ ವಿವೇಕ ಶ್ಯಾನುಭಾಗವರ ಇತ್ತೀಚಿನ ಕವನ ಸಂಕಲನ ಹೊಳೆದದ್ದನ್ನು ಹೇಳಲಿಲ್ಲ ಕೃತಿಯನ್ನು ಶ್ರೀಮತಿ ಪ್ರಮೋದಾ ಮಾಡಾರವರು ವಿಮರ್ಶಿಸುತ್ತ ಗಟ್ಟಿಯಾದ ದಾರದಲ್ಲಿ ಪೋಣಿಸಿದ ಉತ್ತಮ ಕವನ ಸಂಕಲನ. ಮತ್ತೆ ಮತ್ತೆ ಓದಬೇಕೆನಿಸುವಂತಹ ಕವನಗಳು ಎಂದು ಅಭಿಪ್ರಾಯ ಪಟ್ಟರು.

ಡಾ. ಸುನೀತಿ ಉದ್ಯಾವರ ಅವರ ಇತ್ತೀಚಿನ ಕವನ ಸಂಕಲನ 'ಗೊಂಚಲು' ಕೃತಿಯನ್ನು ವಿಮರ್ಶಿಸಿದ ವಿದ್ಯಾಧರ ಮುತಾಲಿಕ ದೇಸಾಯಿಯವರು ಗೊಂಚಲು ಕವನ ಸಂಕಲನದಲ್ಲಿನ ಬಹುತೇಕ ಕಾವ್ಯಗಳು, ವಾಸ್ತವ - ಹಾಗೂ ಆದರ್ಶಗಳ ಆಶಯ ಹೊಂದಿದ್ದು ಅವು ಮುಖಾಮುಖಿಯಾಗಿದ್ದರೆ ಕಾವ್ಯ ಸತ್ವ ಹೆಚ್ಚುತ್ತಿತ್ತು. ವಿದ್ಯಾರ್ಥಿಗಳು ಭಾವಗೀತೆ ಸಮೂಹಗೀತೆ - ಪ್ರಾಥಮಿಕ ಶಾಲಾ ಮಕ್ಕಳಿಗೆ ರಾಗಬದ್ಧವಾಗಿ ಹಾಡಲು ಯೋಗ್ಯವಾದ ಪ್ರಾಸಗಳಿಂದ ಒಡಗೂಡಿದ ಕವನಗಳೇ ಜಾಸ್ತಿ. ಈ ನಿಟ್ಟಿನಲ್ಲಿ ಕಾವ್ಯ ಪ್ರಸಾರಕ್ಕೆ ಶಾಲೆಗಳೂ ಒತ್ತು ಕೊಡಬೇಕೆಂದು ಹೇಳುತ್ತ ಪ್ರಾಸಗಳು ಕಾವ್ಯ ಶಿಥಿಲತೆಗೆ ಕಾರಣವಾಗಬಾರದೆಂದರು.

ಎಂ.ಬಿ. ಕುಕ್ಯಾನರ 'ಮೋಸದ ಬೀದಿ' ಕಥಾ ಸಂಕಲನ ವಿಮರ್ಶಿಸಿದ ಪ್ರೊ. ಸೀತಾರಾಮ ಶೆಟ್ಟಿಯವರು ಈ ಕಥೆಗಳು ವಾಸ್ತವ ಘಟನೆಗಳನ್ನು ಆಧರಿಸಿದ್ದು ಸುಂದರವಾಗಿ ನಿರೂಪಿಸಲಾಗಿದೆ. ವಿವರಣೆಗಳಿಗೆ ಆದ್ಯತೆ ನೀಡಲಾಗಿದೆ. ದಿನನಿತ್ಯದ ಹಲವಾರು ಆಗು-ಹೋಗುಗಳಲ್ಲಿ ಯಾವ ರೀತಿ ನಡೆಯುತ್ತವೆ ಎಂಬುದನ್ನು ಕಥೆಗಳ ಮುಖಾಂತರ ತೋರಿಸಿಕೊಟ್ಟಿದ್ದಾರೆ.

ಆರ್.ಜೆ. ಕಾಲೇಜ್ ಕನ್ನಡ ಸಂಘದ ಕಾರ್ಯಾಧ್ಯಕ್ಷ ಹಾಗೂ ಕನ್ನಡ ವಿಭಾಗ ಮುಖ್ಯಸ್ಥ ಡಾ. ಕೆ. ರಘುನಾಥ ರವರು ಅತಿಥಿಗಳನ್ನು ಪರಿಚಯಿಸುತ್ತ ಕ.ಸಾ.ಪ. ಅಧ್ಯಕ್ಷರಿಂದ ಹಾಗೂ ಗಣ್ಯರಿಂದ ವಿಮರ್ಶಕರಿಗೂ ವಿವಿಧ ಸಂಘಗಳ ಪದಾಧಿಕಾರಿಗಳಿಗೂ ಪುಷ್ಪಗೌರವ ನೀಡಿಸಿದರು.

## OBITUARY

We are deeply grieved to inform our members of the passing away of one of our senior members, Shri. Dharmaraja Kulkarni, on 9th January 2004. He was under treatment for respiratory problem at Sushrusha Nursing Home.

***


Recipient of Kilachand award, Shri Dharmaraja Kulkarni was the editor of Rubber News.

An active worker for the freedom of India movement, he had taken part in the Quit India Movement, in 1942. He always had a keen interest in the activities of the Association and had many friends here, who will miss him.

***

Shri. Kulkarni leaves behind his wife Meera and daughter Revathi. Our thoughts are with the family members of Shri.Kulkarni in this hour of grief. We pray that they be endowed with the strength to bear this loss.

## ಶ್ರದ್ಧಾಂಜಲಿ



ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಹಿರಿಯ ಸಮಾಜ ಸೇವಕ, ಲೇಖಕ, ಜಿ.ವಿ. ಶೆಟ್ಟಿಗಾರ್ ಅವರು ಇತ್ತೀಚೆಗೆ ಹೊರನಾಡ ಕನ್ನಡ ಸಂಸ್ಕೃತಿ ಸಮಾವೇಶದ ವೇದಿಕೆಯಲ್ಲೇ ಹೃದಯ ಸ್ತಂಭನವಾಗಿ ನಿಧನರಾದರು. ಅಪರಾಹ್ನ ಸಮಾವೇಶದ ಅಂಗವಾಗಿ ನಡೆದ ರಾತ್ರಿ ಶಾಲೆಯ ವಿದ್ಯಾರ್ಥಿಗಳ ಜತೆ ಸಂವಾದ ಕಾರ್ಯಕ್ರಮದಲ್ಲಿ ಮದರ್ ಇಂಡಿಯಾ ರಾತ್ರಿ ಶಾಲೆಯನ್ನು ಪ್ರತಿನಿಧಿಸುತ್ತಿದ್ದ ಜಿ.ವಿ. ಶೆಟ್ಟಿಗಾರ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಬಳಿಕ ವೇದಿಕೆಯಲ್ಲಿ ಕುಳಿತಿದ್ದಾಗ ಹೃದಯ ಸ್ತಂಭನವಾಗಿ ಕುಸಿದು ಬಿದ್ದರು. ಅವರನ್ನು ಕೂಡಲೇ ಸಮೀಪದ ಸಯಾನ್ ಆಸ್ಪತ್ರೆಗೆ ಒಯ್ಯಲಾಯ್ತಾದರೂ ಅಲ್ಲಿಗೆ ತಲುಪುವ ಮೊದಲೇ ಕೊನೆಯುಸಿರೆಳೆದಿದ್ದರು. 62 ವರ್ಷ ಪ್ರಾಯವಾಗಿದ್ದ ಅವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಲೇಖಕರಾಗಿದ್ದ ಶ್ರೀಯುತರು ರಾತ್ರಿ ಶಾಲೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದ್ದರು. 'ಕರುಣಾಳು ಬಾ ಬೆಳಕೆ' (ಕಥಾಸಂಕಲನ), ವೀರಭದ್ರ ಸ್ತುತಿ (ಕಾವ್ಯ ಸಂಗ್ರಹ), ಶ್ರೀಗುರು ಪಿತ್ರಾಂಮೃತ (ಲೇಖನ ಸಂಕಲನ), ಮತ್ತು 'ಪ್ರಬಂಧನ್ ಕೆ ಪ್ರಮುಖ್ ಪಹಲೂ' (ಹಿಂದಿ) ಎಂಬ ಕೃತಿಗಳನ್ನು ಪ್ರಕಟಿಸಿರುವ ಅವರು ಅನೇಕ ಬಿಡಿ ಲೇಖನಗಳನ್ನು ಮತ್ತು ಕವನಗಳನ್ನು ಬರೆದಿದ್ದಾರೆ. ರಾಷ್ಟ್ರಭಾಷಾ ರತ್ನ ಪದವಿ ಹೊಂದಿದ್ದ ಅವರು ಬ್ಯಾಂಕ್ ಆಫ್ ಮಹಾರಾಷ್ಟ್ರದ ಹಿರಿಯ ಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಜನತಾ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿ ವಿದ್ಯಾವಿಕಾಸದ ಕಾರ್ಯದರ್ಶಿಯಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಮದರ್ ಇಂಡಿಯಾ ರಾತ್ರಿ ಶಾಲೆಯಲ್ಲಿ ಬೋಧಿಸಿದ್ದ ಅವರು ಸ್ವಲ್ಪ ಸಮಯ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ಅಗಲಿದ ಶೆಟ್ಟಿಗಾರ ಅವರ ದಿವ್ಯಾತ್ಮಕ್ಕೆ 'ನೇಸರು' ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

No. TECH/47-202/MBI/2003-05
Date of Posting : 10-2-2004

ಅಧ್ಯಕ್ಷೀಯ ಭಾಷಣದಲ್ಲಿ ಡಾ. ಜಿ.ಡಿ. ಜೋಶಿಯವರು ಈ ಕೃತಿ ವಿಮರ್ಶೆ ಕಾರ್ಯಕ್ರಮಗಳಿಂದ ಮುಂಬಯಿ ಕನ್ನಡ ಲೇಖಕರನ್ನು ಪರಿಚಯಿಸುವ ಹಾಗೂ ಕೃತಿಗಳ ಬಗೆಗೆ ಆಸಕ್ತಿ ಹುಟ್ಟಿಸುವ ಕಾರ್ಯ ಮಾಡಿದಂತಾಗಿ ಕನ್ನಡ ಸಾಹಿತ್ಯ ಭಾಷೆ ಸಂಸ್ಕೃತಿಗಳನ್ನು ಉಳಿಸಲು ಇಂತಹ ಕಾರ್ಯ ಸಹಕಾರಿಯಾಗುತ್ತದೆ ಎಂದರು. ಕಾರ್ಯಕ್ರಮ ನಿರೂಪಣೆ ಪರಿಚಯಗಳ ಜವಾಬ್ದಾರಿಯನ್ನು ಡಾ. ಕೆ. ರಘುನಾಥ ವಹಿಸಿಕೊಂಡಿದ್ದರು.

**ಶ್ರೀ ಆದಿ ಶಕ್ತಿ ಕನ್ನಡ ಶಾಲೆಯ ವಾರ್ಷಿಕೋತ್ಸವ**

ಸ್ಪರ್ಧಾತ್ಮಕ ಕ್ರಿಯೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು. ಗುರುಹಿರಿಯರನ್ನು ದೀನದಲಿತರನ್ನು ಗೌರವದಿಂದ ಕಾಣಬೇಕು. ಕೇವಲ ಹಣಗಳಿಸುವುದೇ ಮುಖ್ಯ ಧ್ಯೇಯವಲ್ಲ. ಮಾನವನಾಗಿ ಬದುಕಬೇಕೆಂದು ಮುಂಬಯಿಯ ಬಂಟರ ಸಂಘದ ಮಾಜಿ ಅಧ್ಯಕ್ಷ ಮೇರ್ಕಳ ತ್ಯಾಂಪಣ್ಣ ಶೆಟ್ಟಿಯವರು ಘೋಷಿಸಿದರು. ಇವರು ಶ್ರೀ ಆದಿಶಕ್ತಿ ಕನ್ನಡ ಸಂಘದ ಶಾಲೆಯ ವಾರ್ಷಿಕೋತ್ಸವದ ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಿದ್ದರು.

ವಿದ್ಯಾರ್ಥಿಗಳ ಏಕ ಮನಸ್ಸಿನಿಂದ ಅಧ್ಯಯನ ಶೀಲರಾಗ ಬೇಕು. ಚಂಚಲಚಿತ್ತತೆ ಅಪಾಯಕಾರಿಯಾಗಿದೆ. ಸಮಾಜಕಂಟಕ ವಿಚಾರಗಳಿಂದ ದೂರ ಸರಿಯಬೇಕು. ಸುಂದರ ಕನಸನ್ನು ನನಸಾಗುವಂತೆ ಪ್ರಯತ್ನ ಶೀಲರಾಗಬೇಕೆಂದು ಭೀವಂಡಿಯ ಹೋಟೇಲ್ ಮಾಲಿಕರ ಸಂಘದ ಉಪಾಧ್ಯಕ್ಷ ಸುಂದರ ಕೆ. ಶೆಟ್ಟಿ ಅವರು ಕಿವಿಮಾತು ಹೇಳಿದರು.

ಕನ್ನಡದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ದೈನಂದಿನ ಅಧ್ಯಯನ ಕ್ರಮ ಪ್ರಯೋಜನಕಾರಿಯಾಗಿದೆ, ಶಿಕ್ಷಕರೊಡನೆ ಸಂವಾದ ನಡೆಸಿ ಜ್ಞಾನ ಬೆಳೆಸಿಕೊಳ್ಳಬೇಕು. ಪಠ್ಯೇತರ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಬೇಕೆಂದು ಮುಂಬಯಿ ಬಂಟರ ಸಂಘದ ಯುವ ವಿಭಾಗದ ಕಾರ್ಯದರ್ಶಿ ಬಾಲಕೃಷ್ಣ ಹೆಗ್ಡೆ ಅವರು ಹೇಳಿದರು.

ಶಾಲೆಯನ್ನು ಅತ್ಯುತ್ತಮ ಶಿಕ್ಷಣ ಕೇಂದ್ರವನ್ನಾಗಿಸುವಲ್ಲಿ ಕನ್ನಡಿಗರೆಲ್ಲರ ತುಂಬು ಮನದ ಸಹಕಾರಬೇಕು. ನಿಮ್ಮೆಲ್ಲರನ್ನು ಕೂಡಿಕೊಂಡು ಸಹಕಾರಗಳಿಂದ ಶಾಲೆಯನ್ನು ಕಟ್ಟುತ್ತೇವೆ. ಬಡವಿದ್ಯಾರ್ಥಿಗಳಿಗೆ ಸಹಾಯ ನೀಡುವುದು ಪುಣ್ಯದ ಕೆಲಸವೆಂದು ಶಾಲೆಯ ಸಂಘದ ಅಧ್ಯಕ್ಷ ಉಳ್ತೂರುಗುತ್ತು ವಾಮನ ಕೆ. ಶೆಟ್ಟಿ ಹೇಳಿದರು.

ಕನ್ನಡ ತುಳು ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಕವಯಿತ್ರಿ ಸಾಹಿತಿ ಡಾ. ಸುನೀತಾ ಉದ್ಯಾವರ್, ರಾಮಮೋಹನ್ ಶೆಟ್ಟಿ ಬಳ್ಕುಂಜೆ, ಕಡಂದಲೆ ವಾಸು ಶೆಟ್ಟಿ, ಕನ್ನಡ ಸಂಜೀವಿನಿ ಡಾ. ಸಂಜೀವ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಶಾಲು ಹೊದಿಸಿ ನೆನಪಿನ ಕಾಣಿಕೆಯನ್ನಿತ್ತು ಸನ್ಮಾನಿಸಲಾಯಿತು.

## ಶ್ರದ್ಧಾಂಜಲಿ



ಕರ್ನಾಟಕದ ಮಾಜಿಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರ ನಿಧನದಿಂದ ಮೈಸೂರು ಅಸೋಸಿಯೇಶನ್ ಒಬ್ಬ ಸಹೃದಯ ಅಭಿಮಾನಿಯನ್ನು ಕಳೆದುಕೊಂಡಿದೆ. ಶ್ರೀ ಹೆಗಡೆಯವರು ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ಅಸೋಸಿಯೇಶನ್‌ಗೆ ಮೂರು ಸಾರಿ ಭೇಟಿ ಕೊಟ್ಟಿದ್ದರು. ಅಸೋಸಿಯೇಶನ್‌ನ ವಜ್ರ ಮಹೋತ್ಸವದಲ್ಲಿ ಅವರು ವಿಶೇಷ ಅತಿಥಿಯಾಗಿ ಆಗಮಿಸಿದ್ದರು. ಅಸೋಸಿಯೇಶನಿನ ಆಗುಹೋಗುಗಳಲ್ಲಿ ವಿಶೇಷ ಆಸ್ಥೆ ವಹಿಸುತ್ತಿದ್ದರು. 'ನೇಸರು' ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.


## ಉತ್ತರ ಭಾರತ ಪ್ರವಾಸಗಳು
## Tours to Historical/ Religious Places

| | Frequency | Fare | |
|---|---|---|---|
| 1) Delhi – Yamunotri – Gangotri – Badrinath – Kedarnath – Delhi | 1st/ 3rd Friday | 6,500/- | ** |
| 2) Delhi – Badrinath – Kedarnath – Delhi | Every Mon/Fri | 4,200/- | ** |
| 3) Delhi – Agra – Allahabad –Varanasi – Gaya – Ayodhya – Delhi | 1st/ 3rd Saturday | 5700/- | ** |
| 4) Delhi – Shimla – Kullu – Manali – Chandigarh – Delhi | Every Friday | 3,500/- | * |
| 5) Delhi – Manali – Dalhousie – Vaishnodevi – Amritsar – Chandigarh – Delhi | Every Monday | 5,000/- | * |
| 6) Delhi – Jaipur – Fathepur Sikri – Agra – Mathura – Delhi (Golden Triangle Tour) | Every Mon/Friday | 1,100/- | * |
| 7) Delhi – Mussoorie – Haridwar – Rishikesh – Delhi | Every Tue/Friday | 1,200/- | * |

**We are authorised to run L.T.C. Tours by India Tourism Development Corporation (ITDC) to employees working in various departments of Government of India and Central Government undetakings.**

** **Includes vegetarian food enroute, transport, accommodation & Guide Service**

* **Includes non A/c room accommodation on twin sharing basis by non A/c coach.**

We are running LFC Tours for all banks/ LIC employees. All the above tours are by Super Deluxe buses, starting from our New Delhi office.

Also contact for tours to South India & hotel accommodation bookings all over India

**Contact Our Offices for Advance Reservations :** Bangalore – 2226 2633; Hyderabad – 2330 7658; Vizag – 2745565; Vijaywada – 576624& Chennai – 2538 5253

ನೀವು ದಿಲ್ಲಿಗೆ ಬಂದಾಗ ಅತ್ಯಾಧುನಿಕ ಸೌಕರ್ಯಗಳೊಂದಿರುವ ನೂರಾರು ರೂಮ್‌ಗಳಿರುವ ಹೋಟೆಲ್ ಸದರನ್‌ನಲ್ಲಿ ವಸತಿ ತೆಗೆದುಕೊಳ್ಳಿ. ರುಚಿಯಾದ ಕರ್ನಾಟಕ ಮತ್ತು ಆಂಧ್ರದ ವಿವಿಧ ವ್ಯಂಜನಗಳು ನಮ್ಮ ಹೋಟೆಲ್‌ನಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಸಿಗುವುದು.

**HOTEL SOUTHERN / SOUTHERN TRAVELS PVT. LTD.**

**(Recognised by Ministry of Tourism, Govt. of India)**

(ದೆಹಲಿಯಲ್ಲಿರುವ ದಕ್ಷಿಣ ಭಾರತದ ಪ್ರಮುಖ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ.)

**Head Office: 18/2, Arya Samaj Road, Karol Bagh, New Delhi – 110 005**
**Ph. 2572 2210,2 573 9508 • Fax: 011-2575 1308 • E-mail: southern@del2.vnsl.net.in**

**Branch Office: F-38, Dadar Manish Market, Senapati Bapat Marg, Dadar (West), Mumbai – 400 028**
**Ph: 2432 6895, 2432 6688 • Fax: 2432 6688 • E-mail: southerntravels@vsnl.com**


Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938